ಉಪನ್ಯಾಸ ಗ್ರಂಥಮಾಲೆ

೩೨೨

ಕನ್ನಡ ಜನಪದ ಕಾವ್ಯದಲ್ಲಿ ಭಕ್ತಿಯ ನಿರೂಪಣೆ

ಬಸವರಾಜ ಮಲಶೆಟ್ಟಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಮಾರ್ಚ, ೧೯೮೩

ಪ್ರಕಾಶಕರು :

ಸಿ. ಎಸ್. ಕೆಣವಿ

ನಿರ್ದೇಶಕರು,

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು

ಮಾರ್ಚ್, ೧೯೮೨

ಬೆಲೆ : ೫೦ ಪೈಸೆ

ಮುದ್ರಕರು :

ಎಂ. ಎಸ್. ಹಿರಿಯಣ್ಣಯ್ಯ

ನಿರ್ದೇಶಕರು,

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ

ಧಾರವಾಡ–೫೮೦ ೦೦೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವವರಿಂ
ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿ
ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಸಿಗು
ದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿ
ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿ
ಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವ
ಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೨೧ ಪುಸ್ತಕಗಳು ಪ್ರಕ
ವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗ
ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ.
ಅನೇಕ ಪುಸ್ತಕಗಳು ನಾಲ್ಕು ಐದು ಮುದ್ರಣಗಳನ್ನು
ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನು ಜನ
ಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ
ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯು ಸಂಪೂರ್ಣ ಪ್ರಯೋಜನ
ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿ
ಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ ಡಿ. ಎಂ. ನಂಜುಂಡಪ್ಪ
ಧಾರವಾಡ–೫೮೦ ೦೦೩ ಕುಲಪತಿಗಳು

ಅರಿಕೆ

ಇದು ೧೫-೨-೭೯ರಂದು ಆಂಧ್ರಪ್ರದೇಶದ ಕರ್ನೂಲ ಜಿಲ್ಲೆಯ ನದಿಚಾಗಿಯಲ್ಲಿ ನಾನಿತ್ತ ಪ್ರಚಾರೋಪನ್ಯಾಸದ ವಿಸ್ತೃತ ರೂಪ. ಉಪನ್ಯಾಸ ನೀಡಲು ಅವಕಾಶ ಕಲ್ಪಿಸಿಕೊಟ್ಟು, ನಂತರ ಈ ಪುಸ್ತಿಕೆಯ ಬರೆವಣಿಗೆಗೆ ಕಾರಣರಾದವರು ಪ್ರಸಾರಾಂಗದ ನಿರ್ದೇಶಕರು ಶ್ರೀ ಚೆನ್ನವೀರ ಕಣವಿ ಮತ್ತು ಸಹಾಯಕ ನಿರ್ದೇಶಕರು ಶ್ರೀ ಎಲ್. ಎಂ. ಗುಡ್ಡೀನ ಅವರುಗಳು. ಹಸ್ತಪ್ರತಿ ತಯಾರಿಸಿಕೊಟ್ಟವರು ನನ್ನ ವಿದ್ಯಾರ್ಥಿಮಿತ್ರ ಶ್ರೀ ಶಂಕರಪ್ಪ. ಇವರೆಲ್ಲರಿಗೂ ನಾನು ಕೃತಜ್ಞನಾಗಿರುವೆ.

ವಿಜಯನಗರ ಕಾಲೇಜ್
ಹೊಸಪೇಟೆ
೩೦-೧೦-೮೧

ಬಸವರಾಜ ಮಲಶೆಟ್ಟಿ

ಪ ರಿ ವಿ ಡಿ

೧ ಪ್ರವೇಶ

ಆದಿ ಮಾನವನಲ್ಲಿ ವಿವೇಚನಾ ಶಕ್ತಿ ಉದಯವಾದಾಗಲೇ ದೇವರ ಕಲ್ಪನೆ ಮೂಡಿರಬೇಕು. ತನ್ನ ಬದುಕಿಗೂ ಪ್ರಕೃತಿ ಶಕ್ತಿಗೂ ಇರುವ ನಿಕಟ ಸಂಬಂಧ ಅವನನ್ನು ಯೋಚಿಸಲು ತೊಡಗಿಸಿತು.

ಪ್ರಕೃತಿ ಶಕ್ತಿಗಳು ತನ್ನ ಬದುಕನ್ನು ನಿಯಂತ್ರಿಸುವ ಶಕ್ತಿಗಳಾದುದರಿಂದ ಅವನಲ್ಲಿ ಅವುಗಳ ಬಗ್ಗೆ ಭಯ ಭೀತಿ ಹುಟ್ಟಿತು. ಬೆಳಕು ಕೊಡುವ ಸೂರ್ಯ, ನೀರು ನೀಡುವ ಮಳೆ, ಸುಳಿದು ಬೀಸುವ ಗಾಳಿ, ಆಹಾರ ನೀಡುವ ಭೂಮಿ–ಇವೆಲ್ಲಾ ಅವನಿಗೆ ಬಹಳ ಮಹತ್ವದವುಗಳಾಗಿ ಕಂಡವು. ಇವುಗಳ ಕ್ರಮಬದ್ಧ ಕಾರ್ಯ ವಿಧಾನ ಆದಿಮಾನವನಲ್ಲಿ ಅಚ್ಚರಿಯನ್ನುಂಟು ಮಾಡಿತು. ಈ ಕ್ರಮಬದ್ಧ ಕಾರ್ಯ ವಿಧಾನ ಕೆಲವು ಸಲ ಹೆಚ್ಚು ಕಡಿಮೆಯಾದರೆ ಜೀವನ ಅಸ್ತವ್ಯಸ್ತವಾಗುವುದು ಅನುಭವಕ್ಕೆ ಬಂದದ್ದೇ ತಡ ಅವುಗಳ ಬಗ್ಗೆ ಭಯಭಕ್ತಿಗಳು ಮೂಡಿದವು. ಒಂದೊಂದು ಶಕ್ತಿ ಒಂದೊಂದು ದೇವರಾಯಿತು. ಅವುಗಳನ್ನು ಸಂತೃಪ್ತಿಯಿಂದಿಟ್ಟರೆ ಮಾತ್ರ ತಾನು ಸುಖವಾಗಿರಬಲ್ಲೆನೆಂದು ಅನಿಸಿದಾಗ, ಪೂಜೆ, ಉಪಾಸನೆ, ದಾನ, ಬಲಿಗಳು ಪ್ರಾರಂಭವಾದವು. ನಾಗರಿಕತೆಯ ಕೆಳಸ್ತರದಲ್ಲಿ ಇದು ಇಂದಿಗೂ ನಡೆದುಕೊಂಡು ಬಂದಿದೆ.

ನಾಗರಿಕತೆ ಬೆಳವಣಿಗೆ ಹೊಂದಿದಂತೆಲ್ಲ, ಉಪಾಸನಾ ಕ್ರಮ ಬದಲಾಗುತ್ತ ನಡೆಯಿತು. ಪ್ರಕೃತಿ ಶಕ್ತಿಗಳು ದೇವತೆಗಳಾದರು. ಯಜ್ಞಯಾಗಾದಿಗಳಿಂದ ಅವರನ್ನು ಸಂತೃಪ್ತಿಗೊಳಿಸುವುದು ನಡೆಯಿತು. ಅವರವರ ಮಹತ್ವ, ಯೋಗ್ಯತೆಗಳಿಗೆ ಅನುಸಾರವಾಗಿ ದೇವತೆಗಳನ್ನು ವರ್ಗೀಕರಿಸಲಾಯಿತು. ಒಬ್ಬೊಬ್ಬ ದೇವತೆಯ ಉಪಾಸಕರು ತಮ್ಮ ದೇವತೆಯೇ ಸರ್ವ ಶ್ರೇಷ್ಠವೆಂದು ಪ್ರತಿ ಪಾದಿಸಲಾರಂಭಿಸಿದ್ದರಿಂದ ಅನೇಕ ದೇವೋಪಾಸನೆಯ ವಿಚಾರ ಪ್ರಚಾರಕ್ಕೆ ಬಂದಿತು. ಹಿಂದೆಯೇ ಬೇರೆ ಬೇರೆ ಧರ್ಮಗಳು ಹುಟ್ಟಿ ಕೊಂಡವು. ಈ ಧರ್ಮಗಳು ಸಾಮಾನ್ಯವಾಗಿ ತಮ್ಮ ದೇವರನ್ನು ಪೂಜಿಸುವ ರೀತಿ, ನಿಯಮಗಳನ್ನು ಹೆಚ್ಚಾಗಿ ಹೇಳುತ್ತಾ ಸಾಗಿ ದವು. ಈ ಸಂದರ್ಭದಲ್ಲಿ ಮೊದಲಿದ್ದ ಅನಾಗರಿಕ, ಒರಟು ಭಾವನೆಗಳು ಬದಲಾದವು. ದೇವರ ಮೇಲಿನ ನಂಬಿಕೆ, ಭಕ್ತಿ ಬೆಳೆದವು.

ನಾಗರಿಕ ವಲಯದಲ್ಲಿ ಹುಟ್ಟಿ ಬೆಳೆದ ಧರ್ಮಗಳು ಭಕ್ತಿಯ ಬಗ್ಗೆ ಹೆಚ್ಚು ಒತ್ತು ಕೊಟ್ಟದ್ದು ಜನರನ್ನು ತಮ್ಮತ್ತ ಆಕರ್ಷಿಸಲು. ಮನುಷ್ಯನಲ್ಲಿ ಪ್ರೀತಿ, ವಾತ್ಸಲ್ಯ, ಸ್ನೇಹ, ಗೌರವ, ಮುಂತಾದ ಭಾವನೆಗಳು ಸಹಜವಾಗಿಯೇ ಇರುತ್ತವೆ. ಈ ಭಾವನೆಗಳನ್ನು ದೇವರತ್ತ ಹರಿಸಿದರೆ ಅದೇ ಭಕ್ತಿಯಾಗುತ್ತದೆ. ಈ ತತ್ವ ಜನಸಾಮಾನ್ಯರಿಗೆ ನೇರವಾಗಿಯೂ ಕಂಡದ್ದರಲ್ಲಿ ಆಶ್ಚರ್ಯವೇನಿಲ್ಲ, ಭಗವಂತನನ್ನು ಸೇರುವ ಮಾರ್ಗಕ್ಕೆ ಹಿಂದುಗಳು ಯೋಗವೆಂದು ಕರೆಯುತ್ತಾರೆ. ಒಂದು ಗುರಿ ಸೇರಲು ಹಲವಾರು ದಾರಿಗಳಿರು ವಂತೆ, ಭಗವಂತನನ್ನು ಹೊಂದಲು ಹಲವಾರು ಉಪಾಸನಾ ಮಾರ್ಗಗಳಿರುತ್ತವೆ. ಉದಾ :– ರಾಜಯೋಗ, ಜ್ಞಾನಯೋಗ.

ಕರ್ಮಯೋಗ, ಇತ್ಯಾದಿ. ಇವುಗಳಲ್ಲೆಲ್ಲಾ ಹೆಚ್ಚು ಸುಲಭವಾದುದು ಭಕ್ತಿಯೋಗ. ಹೀಗೆ ಭಕ್ತಿ ಒಂದು ಮಹತ್ವದ ಸಾಧನಾ ಮಾರ್ಗವಾಯಿತು. ಭಗವಂತನನ್ನು ಅನನ್ಯ ಪ್ರೀತಿಯಿಂದ ಕಾಣಲು ಹೇಳುವ ಈ ವಿಧಾನ ಹೆಚ್ಚು ಪ್ರಚಾರವನ್ನು ಪಡೆಯಿತು. ಕಾಲ ಕಾಲಕ್ಕೆ ಭಕ್ತ ಕವಿಗಳು, ಭಕ್ತಿ ಸಾಹಿತ್ಯವನ್ನು ರಚಿಸಿ ಈ ಪಂಥದ ಪ್ರಗತಿಗೆ ಸಹಾಯಕರಾದರು.

ಜಾನಪದ ಸಾಹಿತ್ಯದಲ್ಲಿ ಭಕ್ತಿಯ ನಿರೂಪಣೆ ಸಹಜವಾಗಿ ಬಂದಿದೆ. ಮಾರ್ಗ ಕವಿಗಳಂತೆ ಜಾನಪದ ಕವಿಗಳೂ ತಮ್ಮ ಭಕ್ತಿಯ ಆಧಿಕ್ಯವನ್ನು ಸೂರೆಗೊಂಡಿದ್ದಾರೆ. ಆದರೆ ಶಿಷ್ಟರ ಭಕ್ತಿ ಭಾವಕ್ಕೂ ಜಾನಪದರ ಭಕ್ತಿ ಭಾವಕ್ಕೂ ವ್ಯತ್ಯಾಸವಿರುವುದು ತೀರಾ ಸ್ಪಷ್ಟವಾಗಿದೆ. ಅವರವರ ಜೀವನ ವಿಧಾನ, ಅನುಭವದ ವಿಸ್ತಾರ ಇವುಗಳನ್ನು ಗೌಣವಾಗಿ ಕಂಡು ಕೇವಲ ಭಕ್ತಿಯೊಂದನ್ನೇ ಹೋಲಿಸಿ ನೋಡಿದರೆ, ಜಾನಪದರ ಭಕ್ತಿಯೇ ಹೆಚ್ಚು ಭಾವಪೂರ್ಣವಾಗಿದುದು ಕಂಡುಬರುತ್ತದೆ. ಅವರ ಮನಸ್ಸು ಮುಗ್ಧ, ಅಂತೆಯೇ ಅವರ ಅನಿಸಿಕೆ ಭಾವನೆಗಳೂ ಮುಗ್ಧ. ನಾಗರಿಕತೆ ಬೆಳೆದಂತೆ ಮುಗ್ಧತೆ ಮಾಯವಾಗಿ ವಿಚಾರ, ತರ್ಕಗಳು ಬೆಳೆದುನಿಲ್ಲುತ್ತವೆ. ಮುಗ್ಧತೆಯಲ್ಲಿರುವ ಭಾವಸ್ನಿಗ್ಧತೆ, ತರ್ಕ-ಬುದ್ಧಿಗಳಲ್ಲಿ ಹೇಗೆ ಇರಲು ಸಾಧ್ಯ? ಜಾನಪದರ ಅಂದರೆ ನಮ್ಮ ಹಳ್ಳಿಗರ ಮನಸ್ಸು ಉದ್ವೇಗ-ಭಾವಾವೇಷಕ್ಕೆ ಒಳಗಾಗುವಂತೆ ನಾಗರಿಕ ಜನಾಂಗದವರ ಮನಸ್ಸು ಒಳಗಾಗಲಾರದು. ಇವರ ಭಾವನೆಗಳನ್ನು ಕೃತಕ ಗಾಂಭೀರ್ಯ, ಮರ್ಯಾದೆಗಳು ನಿಯಂತ್ರಿಸುತ್ತವೆ. ದೇವರ ಎದುರು ಹಳ್ಳಿಗರ ಮನಸ್ಸು ಕರಗಿದಂತೆ ನಗರವಾಸಿಗಳ ಮನಸ್ಸು ಕರಗಲಾರದು.

ಈ ದೃಷ್ಟಿಯಿಂದ ನೋಡಿದಾಗ ಜನಪದ ಭಕ್ತಿಯೇ ಸಹಜ ಸೊಬಗನ್ನೂ ಹೊಂದಿರುವಂತಹದು. ಇಲ್ಲಿ ಕೃತಕತೆಗೆ ಎಡೆಯಿಲ್ಲ. ಎಲ್ಲವೂ ನೇರ ಸರಳ, ದೇವರ ಬಗ್ಗೆ ಭೀತಿಯಿಲ್ಲ–ಪ್ರೀತಿಯಿದೆ. ಆ ಪ್ರೀತಿಯನ್ನು ತಮ್ಮ ತಾಯಿ, ತಂದೆ, ಮಕ್ಕಳ, ಬಂಧುಗಳ ಮೇಲೆ ತೋರಿಸುವಂತೆ ತೋರಿಸಿಕೊಂಡಿದ್ದಾರೆ. ಇವರಿಗೆ ತಮ್ಮ ಪರಿಸರವೇ ಪ್ರಪಂಚ. ಹೆಚ್ಚಿನದಕ್ಕಾಗಿ ಕೊರಗಿದವರಲ್ಲ. ತಮ್ಮ ಗ್ರಾಮದೇವತೆಗಳ ಬಗ್ಗೆ, ಸುತ್ತುಮುತ್ತಲಿನ ನಾಡಿನಲ್ಲಿ ಆಗಿಹೋದ ಮಹಾತ್ಮರ ಬಗ್ಗೆ, ಹೊಲಮನೆಗಳಲ್ಲಿರುವ ಬೇರೆಬೇರೆ ವ್ಯಕ್ತಿ, ವಸ್ತುಗಳ ಬಗ್ಗೆ, ತಮ್ಮ ಭಕ್ತಿಯನ್ನು ವ್ಯಕ್ತ ಪಡಿಸಿದ್ದಾರೆ. ಪ್ರಾದೇಶಿಕ ದೇವರುಗಳ ಬಗ್ಗೆ ಹೇರಳವಾದ ಸಾಹಿತ್ಯ ಹುಟ್ಟಿದೆ.

ಪ್ರತಿಯೊಂದು ಕಾರ್ಯದ ಆರಂಭಕ್ಕೆ ದೇವತಾಸ್ತುತಿ ಇರಬೇಕಲ್ಲವೇ? ಈ ಸ್ತುತಿ ಸಂದರ್ಭಕ್ಕೆ ತಕ್ಕಂತೆ ಎಲ್ಲಾ ದೇವ–ದೇವತೆಗಳ ಬಗ್ಗೆಯೂ ಜನಪದ ಹಾಡುಗಳಲ್ಲಿದೆ. ಬಹುಶಃ ಅವರ ಹಾಡುಗಳಿಂದ ಪಾರಾದ ಯಾವ ದೇವತೆಯೂ ಇಲ್ಲ, ಇನ್ನು ತಮ್ಮ ಇಷ್ಟ ದೇವತೆಗಳ ಪವಾಡ, ಲೀಲೆ, ಮಹಿಮೆಗಳನ್ನು ಕುರಿತು ಹಾಡಿರುವ ದೀರ್ಘ ಕವನಗಳು. ಕಥೆಹೇಳುವುದು ಇವುಗಳ ಉದ್ದೇಶವಾಗಿದ್ದರೂ ಇವೆಲ್ಲಾ ಭಕ್ತಿ ರಸದಲ್ಲಿ ಅದ್ದಿ ತೆಗೆದಂಥವುಗಳಾಗಿವೆ. ತಮ್ಮ ದೇವರುಗಳ ಬಗ್ಗೆ ಎಷ್ಟು ಹಾಡಿ–ಹೊಗಳಿದರೂ ಈ ಜನಕ್ಕೆ ತೃಪ್ತಿಯಿಲ್ಲ. ಕೆಲವು ದೇವತೆಗಳ ಬಗ್ಗೆ ಹಾಡುತ್ತಾ, ತಿರುಗಿ ಭಕ್ತಿ ಪ್ರಸಾರ ಕೈ ಕೊಂಡಿರುವಂಥ ವಿವಿಧ ಸಂಪ್ರದಾಯಗಳೂ ಹುಟ್ಟಿಕೊಂಡಿವೆ. ಉದಾಹರಣೆಗೆ :_ ಜೋಗತೇರು, ಗೊಂದಲಿಗರು ಇತ್ಯಾದಿ, ಕಾಮಣ್ಣ, ಜೋಕುಮಾರ ಇತ್ಯಾದಿ ದೇವರುಗಳ ಬಗ್ಗೆ ಹಬ್ಬಗಳನ್ನು ಆಚರಿಸಲಾಗುತ್ತದೆ. ಆ ಹಬ್ಬಕ್ಕೆ ಸಂಬಂಧಿಸಿದಂತೆ

ಅನೇಕ ಭಕ್ತಿಯ ಹಾಡುಗಳನ್ನು ಹಾಡಲಾಗುತ್ತದೆ. ಈ ಎಲ್ಲಾ ರೀತಿಯಿಂದ ಜನಪದ ಭಕ್ತಿ ಸಾಹಿತ್ಯ ವಿಪುಲವಾಗಿ ಬೆಳೆದಿದೆ.

೨. ಸ್ತುತಿ–ಪ್ರಾರ್ಥನೆ

ದೇವರ ಮೇಲೆ ಜಾನಪದರ ನಿಷ್ಠೆ ಅಪಾರವಾದುದು. ಜೀವನದ ಪ್ರತಿಯೊಂದು ಸನ್ನಿವೇಶವೂ ಈ ದೇವತಾ ಕೇಂದ್ರ ಬಿಂದುವಿನ ಸುತ್ತ ತಿರುಗುವುದೆಂದು ಅವರ ಅಚಲ ನಂಬಿಗೆ. ಒಳಿತು–ಕೆಡುಕುಗಳೆಲ್ಲ ದೇವರ ಕೃಪೆ–ಕೋಪಗಳಿಂದ ಉಂಟಾಗು ವಂಥವು. ಆದ್ದರಿಂದ ದಿನದ ಆರಂಭಕ್ಕೆ, ಯಾವ ಕೆಲಸಕ್ಕೂ ಕೈ ಹಚ್ಚುವ ಮುಂಚೆ ದೇವರನ್ನು ಸ್ತುತಿಸುವುದು ಜನಪದ ಬದುಕಿನ ಸಾಮಾನ್ಯ ಲಕ್ಷಣವಾಗಿದೆ. ಬಹುಶಃ ಹಳ್ಳಿಯ ಮನೆ ನಿದ್ರೆಯಿಂದ ಎಚ್ಚರಾಗುವುದು ಆ ಮನೆಯ ಗೃಹಿಣಿಯ ಮೂಲಕ. ಬೆಳಗಿನ ಜಾವಕ್ಕೆ ಎದ್ದು ಗೃಹಿಣಿ ದಿನದ ಕೆಲಸಕ್ಕೆ ತೊಡಗುತ್ತಾಳೆ. ಕೆಲಸದಲ್ಲಿ ಮೈ ಮರೆಯುವ ಮೊದಲು ದೇವ ದೇವತೆಗಳನ್ನು ನೆನೆದು ತನ್ನ ಭಕ್ತಿಯನ್ನು ಅರ್ಪಿಸುವ ಗರತಿಯ ಭಾವುಕ ಜೀವನ ಚಿತ್ರ ಇಂಥ ಸ್ತುತಿಪದಗಳಲ್ಲಿ ನಿಚ್ಚಳವಾಗಿ ಮೂಡಿನಿಂತಿದೆ.

ಬೆಳಗಾಗೆ ನಾನೆದ್ದು ಯಾರ್ಯಾರ ನೆನಿಯಲಿ
ಎಳ್ಳು ಜೀರಗಿ ಬೆಳೆಯೋಳ। ಭೂಮಿ ತಾಯ್ನ
ಎದ್ದೊಂದು ಗಳಿಗೆ ನೆನದೇನ.

ಎಂದು ಭೂಮಿತಾಯಿಗೆ ತನ್ನ ಕೃತಜ್ಞತೆಯನ್ನು ಅರ್ಪಿಸುತ್ತಾಳೆ. ಎಲ್ಲಾ ದೇವತೆಗಳಿಗಿಂತ ನಮ್ಮನ್ನು ಸಲಹುವ ಭೂಮಿ ತಾಯಿ ಯನ್ನು ಸ್ತುತಿಸಿರುವುದು ಮಹತ್ವದ ಅಂಶವಾಗಿದೆ. ಭೂಮಿ

ಬೆಳೆದರೆ ಮಾತ್ರ ತಮ್ಮ ಜೀವನ ಸುಗಮವೆಂದು ಅವಳು ಅರಿತಿದ್ದಾಳೆ. ಆದ್ದರಿಂದ ಗರತಿಯ ದೃಷ್ಟಿಯಲ್ಲಿ ಪ್ರಥಮ ಪ್ರಾಶಸ್ತ್ಯ ಭೂಮಿಗೆ. ಇನ್ನು ಅವಳ ದಿನದ ಚಟುವಟಿಕೆ ಹಿಟ್ಟು ಬೀಸುವುದರಿಂದ ಪ್ರಾರಂಭವಾಗಬೇಕಷ್ಟೆ ಕಾಳು ತಿಂದು ಹಿಟ್ಟು ಕೊಡುವ ಬೀಸುವ ಕಲ್ಲು ಕೂಡ ಅವಳಿಗೆ ದೇವರೇ.ಅದರ ಎದುರಿಗೆ ಕುಳಿತು:

ಕಲ್ಲಮ್ಮ ಮಾತಾಯಿ ಮೆಲ್ಲಮ್ಮ ರಾಗೀಯ
ಜಲ್ಲ ಜಲ್ಲನೆ ಉದುರಮ್ಮ
ನಾನೀಗ ನೆಲ್ಲಕ್ಕಿ ಪಡಿಯ ನಡಿಸೇನ

ಎಂದು ಹಾಡುತ್ತಾಳೆ. ಜನಪದ ಮನಸ್ಸು ತನಗೆ ಉಪಕಾರಿಯಾಗಿರುವ ವಸ್ತು-ವ್ಯಕ್ತಿಗಳನ್ನೆಲ್ಲ ದೇವರೆಂದು ಭಾವಿಸುವುದೆಂಬುದಕ್ಕೆ ಇದೊಂದು ಉದಾಹರಣೆಯಾಗಿದೆ.ಬೀಸಲು ಪ್ರಾರಂಭಿಸಿದ ಮೇಲೆ ಎಲ್ಲಾ ದೇವತೆಗಳೂ ಅವಳ ಹಾಡಿನಲ್ಲಿ ಬಂದುಹೋಗುತ್ತವೆ.

ಕಲ್ಲಿಗಿ ಮುಕ್ಕ್ಯಾಕಿ ಬಲ್ಲಿದರ ನೆನದೇನ
ಸೊಲ್ಲ ಕೇಳಾಕ ಶಿವ ಬಂದ । ಸಿರಸೈಲ
ಮಲ್ಲಯ್ಯ ಬಂದ ಬಲ ನೋಡ.

ತನ್ನ ಸ್ತುತಿಗೆ ಶಿವನೇ ಕರಗಿ ಕೃಪೆಮಾಡಿ ಇಳಿದು ಬಂದನೆಂಬುದು ಆ ತಾಯಿಯ ನಂಬಿಗೆ. ಹೀಗೆ ಆ ಆ ಸ್ಥಳೀಯ, ಪ್ರಾದೇಶಿಕ, ಪೌರಾಣಿಕ ದೇವತೆಗಳನ್ನು ಕುರಿತು ಹಲವಾರು ಸ್ತುತಿಪದಗಳಿವೆ. ಸುಪ್ರಭಾತ ಕೇವಲ ಶಿಷ್ಟಕವಿತೆಗಳಿಗೇ ಸೀಮಿತವಾದುದಲ್ಲ. ಅದು ಜನಪದ ಹಾಡುಗಳಲ್ಲಿಯೂ ಇದೆ:

ಏಳ ಎಲ್ಲವ್ವ ತಾಯಿ ಎಷ್ಟೊತ್ತ ಮಲಗೀದಿ
ಹೂವೆಂಜಲಾಗಿ ಹುಳಮುಟ್ಟಿ। ಕೊಳದಾನ
ನೀರೆಂಜಲಾಗಿ ಗಿಣಿ ಕುಡದು

ಎಂಬ ನುಡಿ ಅತ್ಯಂತ ಸುಂದರವಾದ ಜಾನಪದ ಸುಪ್ರಭಾತ ವಾಗಿದೆ. ಇಲ್ಲಿಯ ಆಕೃತಿಯ ಭಾವ, ಎಲ್ಲವ್ವನೊಂದಿಗಿರುವ ಆತ್ಮೀಯತೆ ಇವೆಲ್ಲ ಅಪರೂಪದ ಅಂಶಗಳು. ಶಿಷ್ಟ ಸಾಹಿತ್ಯದಲ್ಲಿ ಇಂಥದು ತೀರಾ ವಿರಳ. "ಹೂವೆಂಜಲಾಗಿ ಹುಳಮುಟ್ಟಿ" ಎನ್ನುವ ಸಾಲು ಹರಿಹರನ "ಅನಿಲನಲುಗದ ರವಿಕರಂಪುಗದ" ಎಂಬ ಪುಷ್ಪರಗಳೆಯ ಸಾಲನ್ನು ನೆನಪಿಗೆ ತರುತ್ತದೆ. ಜೋಗತಿಯ ಹಾಡು ಗಳಲ್ಲಿಯಂತೂ ಎಲ್ಲಮ್ಮನ ಸ್ತುತಿ, ಮಹಿಮೆ, ಅಪಾರವಾಗಿದೆ. ಅವಳನ್ನು ಹಾಡಿ ಹೊಗಳುವುದೇ ಅವರ ಕರ್ತವ್ಯವಾಗಿದೆ.

ಗಣಪತಿಗೆ ಜನಪದ ಸಾಹಿತ್ಯದಲ್ಲಿ ವಿಶೇಷ ಮಹತ್ವವಿದೆ. ಶಿಷ್ಟ ಸಮಾಜದ ವಲಯದಲ್ಲಿ, ಶಿವ, ವಿಷ್ಣು ಮುಂತಾದ ಪುರುಷ ದೇವತೆಗಳಿಗೆ ಹೆಚ್ಚಿನ ಪ್ರಾಧಾನ್ಯವಿದೆ. ಅವರ ಪ್ರಭಾವದಡಿಯಲ್ಲಿ ಗಿಡ್ಡ ಗಣಪತಿ ಸಾಕಷ್ಟು ಗೋಚರವಾಗದೇ ಉಳಿದಿದ್ದಾನೆ. ಅಲ್ಲಿ ತನಗೆ ದೊರೆಯದ ಮಾನ-ಮರ್ಯಾದೆಗಳನ್ನು ಇಲ್ಲಿ – ಜಾನಪದ ಜೀವನದಲ್ಲಿ ಗಳಿಸಿಕೊಂಡಿದ್ದಾನೆ. ಯಾವ ಜಾತಿ, ಮತ, ಪಂಥಗಳ ಭೇದ-ಭಾವವಿಲ್ಲದೆ ಜನಪದರು ಗಣಪತಿಯನ್ನು ಸ್ತುತಿಸುತ್ತಾರೆ. ಗಂಡಸರ ಹಾಡುಗಳಿರಲಿ, ಹೆಂಗಸರ ಹಾಡುಗಳಿರಲಿ ಆರಂಭಕ್ಕೆ ಗಣಪತಿ ಸ್ತುತಿ ಇರುವುದು ಸಾಮಾನ್ಯ. ಅವನು ಬುದ್ಧಿಯ ದೇವತೆಯಾಗಿರುವುದರಿಂದ:

ಪಯಿಲೆ ಪ್ರತಮದಾಗ ಯಾ ಅಣ್ಣನ ನೆನಿಬೇಕೋ
ಗವರಿ ಮುಂದಿರುವ ಗಣಪಣ್ಣಗೋ ! ನೆನದರೆ
ಬರವಲ್ದ ಹಾಡಾ ಬರತಾವೊ,

ಎಂದು ಸ್ತುತಿಸಿ ಹಾಡಿನ ಶಕ್ತಿಯನ್ನು ಪಡೆಯುವ ನಂಬಿಕೆಯನ್ನು ವ್ಯಕ್ತ ಮಾಡಲಾಗಿದೆ. ಇಷ್ಟೇ ಅಲ್ಲದೆ.

ಎಳ್ಳ ಹೊಲದಾಗಿರುವ ಡೊಳ್ಳು ಹೊಟ್ಟೆಯ ಬೆನವ
ಎಳ್ಳಿನುಂಡೀಯ ಪನಿವಾರ ! ತಂದೀನಿ
ಎಳ್ಳಷ್ಟು ಮತಿಯ ಕೊಡುನನಗ.

ಎಂದು ಪ್ರಾಮಾಣಿಕವಾಗಿ ವಿನಂತಿಸಿಕೊಂಡಿರುವುದು ಜಾನಪದದ ಸರಳ ಮನಸ್ಸಿಗೆ ಸಾಕ್ಷಿಯಾಗಿದೆ. ಗರತಿಗೆ ಅವಳ ಬೀಸುವ ಕಲ್ಲು ಪೂಜ್ಯವಾದುದರಿಂದ ಮೊದಲು ಅದನ್ನು ನೆನೆದು ಆಮೇಲೆ ಇತರ ದೇವರುಗಳನ್ನು ನೆನೆದಾಳು. ಗಂಡಸರ ಹಾಡುಗಳು ಮಾತ್ರ ಗಣಪತಿಯ ಸ್ತುತಿಯಿಂದಲೇ ಪ್ರಾರಂಭವಾಗಿರುವುದುಂಟು, ಲಾವಣಿ, ಹಂತೀಪದ, ಕೋಲುಪದ, ಹೋಳೀಪದ ಮುಂತಾದವುಗಳಲ್ಲಿ ಗಣಪತಿಯ ಸ್ತುತಿ ಅವಶ್ಯವಾಗಿ ಮೊದಲಿಗೆ ಬಂದೇಬಂದಿರುತ್ತದೆ. ಲಾವಣಿ ಗೀಗೀ ಹಾಡುಗಳಲ್ಲಿ ಗಣಪತಿ ಸ್ತುತಿಗೆ "ಗನ್ನ" ಎಂದು ಹೆಸರು.ಈ ಗನ್ನಗಳು ವಿಶೇಷ ಲಕ್ಷಣಗಳನ್ನು ಒಳಗೊಂಡಿವೆ. ಭಾವ ಸಾಮಗ್ರಿ ಜಾನಪದವಾದರೂ ಶಿಷ್ಟರಚನೆಗಳಂತೆ ತೋರುವ ಈ ಹಾಡುಗಳಲ್ಲಿ ಪ್ರಾಸಾನುಪ್ರಾಸಗಳು ಲಾಸ್ಯವಾಡಿರುವುದನ್ನು ಗುರುತಿಸಬಹುದು. ಒಂದು "ಗನ್ನ" ಹೀಗಿದೆ :–

ಪಾರ್ವತಿಯ ಕಂದ । ಕೈಲಾಸದಿಂದ । ಬಂದ ಇಳದಿಂದ
ವಿಭೂತಿಯ ಗಂಧ। ಪುಷ್ಪ ಚಂದಾ ಚಂದ।
ವಾಸ ಮಕರಂದ। ಪೂಜಿಸುವೆ ನಾನಾ॥
ದೂರ ಮಾಡೋ ಬಂದಂತಾ ವಿಘ್ನ, ಸ್ವಾಮಿ ಭಗವಾನ
ಗನ್ನ ಗಜ ವದನ ಗನ್ನ ಗಜವದನಾ॥೧॥

ಆರು ಶಾಸ್ತ್ರ ಪುರಾಣ ಹದಿನೆಂಟ। ನಾಲ್ಕು ವೇದಗಳ ಗಟ್ಟಿ
ಸತ್ಯ ಸರ್ವ ನೀ ಶ್ರೇಷ್ಠ। ಬಾಲ ಲೀಲಾಟ। ತಿಳದಿ ಮುಕ್ಕಟ್ಟ।
ಹಸ್ತ ನಮಗಿಟ್ಟ। ಮಾಡೋ ಪಾಲನ॥

ಎಡೆ ಬಿಡದೆ ಮಾಡುವೆನು ಭಜನ। ಇಲಿಯು ನಿನ್ನ ವಾಹನ
ಗನ್ನ ಗಜ ವದನ ಗನ್ನ ಗಜ ವದನಾ॥೨॥

ಮೂರು ಲೋಕದಲ್ಲಿ ನಿಮ್ಮ ಶೃತಿ। ಸಾರಿತು ಕೀರ್ತಿ। ಸಭಾದಲ್ಲಿ ಭರತಿ
ನಾಮು ಗಣಪತಿ। ಅಖಂಡ ಮೂರ್ತಿ
ಮರೆಯಲಾರೆ ನಿನ್ನ ಮರೆಯಲಾರೆ ನಿನ್ನ
ಜಂಕರಿಯ ನಾದ ಜನನನನ ನುಡಿಸಿ ಒಂದೆ ಸವನ
ಗನ್ನ ಗಜ ವದನ। ಗನ್ನ ಗಜ ವದನಾ ॥೩॥

ಜೋವಾಲಿ ಹಾರ। ಕೊರಳಲ್ಲಿ। ಶಂಬ ಕೈಯಲ್ಲಿ ವಜ್ರ ಬೆರಳಲ್ಲಿ
ನಂದಿ ಬದಿಯಲ್ಲಿ। ಕಿರಿಟ ತಲಿವಳ್ಯಾಲ
ಹೊಳಿಯುತಾವ ರತನ। ಹೊಳಿಯುತಾವ ರತನ
ಮರ ಕಲ್ಲ ಮಾಡಿದ ಕವನ। ತಿಗಡೊಳ್ಳಿ ಆತನ ಸ್ಥಾನ
ಗನ್ನ ಗಜ ವದನಾ। ಗನ್ನ ಗಜ ವದನಾ ॥೪॥

ಗಣಪತಿಯ ತರುವಾಯ ಇನೊಬ್ಬ ವಿದ್ಯಾಧಿದೇವತೆ ಸರಸ್ವತಿಯನ್ನು ಭಕ್ತಿ ಪೂರ್ವಕವಾಗಿ ಸ್ತುತಿಸಿರುವುದನ್ನು ಸಾಮಾನ್ಯವಾಗಿ ಎಲ್ಲ ಕಡೆಗೂ ಕಾಣುತ್ತೇವೆ.

ಆರೆಲಿ ಮಾವಿನ ಬೇರಾಗಿ ಇರುವೋಳೆ
ವಾಲ್ಗದ ಸದ್ದಿಗೆ ಒರಗೋಳೆ–ಸರಸತಿಯೆ
ನವ್ ನಾಲಿಗಿ ತೊಡರ ಬಿಡಿಸಮ್ಮಾ

ಇದು ಬಹಳಷ್ಟು ಜನಪ್ರಿಯವಾಗಿರುವ ಸರಸ್ವತಿ ಸ್ತುತಿ, ಇಂಥ ಬಿಡಿ ಹಾಡುಗಳಲ್ಲದೆ ಕಥನ–ಕವನಗಳ ಆರಂಭಕ್ಕೆ ಇತರ ದೇವತೆ

ಗಳನ್ನು ಸ್ತುತಿಸುವಾಗ ಮರೆಯದೇ ಸರಸ್ವತಿಯನ್ನು ಸ್ತುತಿಸ ಲಾಗಿದೆ. ಅರ್ಜುನಜೋಗಿ ಕಥೆಯ ಸರಸ್ವತಿ ಸ್ತುತಿ ಹೀಗಿದೆ:

ಬ್ಯಾಳಿ ಬೆಲ್ಲವ ಹಿಡಿದು ರ್‍ಯಾಯದ ಹಲಗಿಯ ಹಿಡಿದು
ಹಡದವ್ವ ನಿನ್ನಲ್ಲಿಗೆ ಬರುವೆನು। ಕೋ। ಸರಸೋತಿ
ಬಾರದ ನುಡಿಯ ಬರದ್ಹೋಳ.

ಭೆಟ್ಟಿಯಾಗಿ ವರ ಕೊಡುವವರೆಗೆ ಸರಸ್ವತಿಯನ್ನು ಗರತಿಯರು ಬಿಡುವವರಲ್ಲ. ಪದ ಕಲಿಯಲು ಅವಳಲ್ಲಿಗೆ ಹೋದಾಗ, ಅವಳ ದರ್ಶನವಿಲ್ಲ. ನಿರಾಶೆಯುಂಟಾದರೂ ಸುಮ್ಮನಿರುವರೇ? ಕಂಡಾಗ ಕೇಳಿಯೇ ಬಿಡುತ್ತಾರೆ–

ಅಕ್ಕ ಸರಸೋತಿ ಎಲ್ಲಿಗೆ ಹೋದ್ಯಮ್ಮ
ನಾನೂ ನನ್ನಕ್ಕ ಹಿರಿಯೋಳು–ಬಂದೀವಿ
ಇದ್ದೋಟು ಪದವ ಕಲಿಸಮ್ಮ.

ಸರಸ್ವತಿ ಸಮಾಧಾನ ಹೇಳುತ್ತಾಳೆ—

ಎಲ್ಲಿಗ್ಹೋಗಲಿಲ್ಲ ಯಾವಂದಿಗ್ಹೋಗನಿಲ್ಲ
ಹಳ್ಳೀ ಮೈಸೂರ ಮಳಿಗೆ। ಮಂಚದಮ್ಯಾಲೆ
ಚಿತ್ತೈಸತಿದ್ದೆ ಪದಗಳ.

ಹೀಗೆ ದೇವರೊಂದಿಗೆ ಅನ್ಯೋನ್ಯವಾದ ಸಂಭಾಷಣೆ ನಡೆಸುವ ಭಾವಸ್ಥಿತಿ ಜನಪದರಿಗೆ ಮಾತ್ರ ಸಾಧ್ಯವಾಗಿದೆ. ಗರತಿಯ ಹೃದಯ ವಾತ್ಸಲ್ಯದ ಆಗರ. ವಾತ್ಸಲ್ಯದ ಎದುರು ದೇವ–ದೇವತೆ ಗಳ ಮಹಿಮಾಶಾಲಿ ವ್ಯಕ್ತಿತ್ವ ಕರಗಿ ಅವರು ಪ್ರೀತಿಯ ಮಕ್ಕಳಾ ಗುತ್ತಾರೆ.ಯಶೋದೆ ಕೃಷ್ಣ ನನ್ನು ಪ್ರೀತಿಸಿದ ವಾತ್ಸಲ್ಯ ಭಕ್ತಿಯಂತೆ, ಗರತಿ ಇತರ ದೇವತೆಗಳನ್ನು ಹಸುಮಕ್ಕಳಂತೆ ಕಂಡಿರುವುದು ಅವಳ

ಅನಂತ ಹೃದಯ ವೈಶಾಲ್ಯಕ್ಕೆ ಸಾಕ್ಷಿಯಶಾಗಿದೆ. ಸೂರ್ಯ ಚಂದ್ರರನ್ನು ಕುರಿತು:

ಮುಂಜೇಲಿ ಮೂಡಿದರ ಅಂಗಳೊಂದ್ಯೆಸಿರಿ
ಬೆಳಗಾದರೊಮ್ಮೆ ಹಸುವುಗನ । ಕೋ। ಸೂರದೇವ
ಬೆಳಗಾದಗೊಮ್ಮೆ ಬಲಗೊಂಡೆ " ಕೋ "
ಚೆಂಜಿಕ ಮೂಡಿದರ ಅಂಗಳೊಂದ್ಯೆಸಿರಿ
ತಿಂಗಳಿಗೊಮ್ಮೆ ಹಸುವಂಗನ ।ಕೋ। ಚಂದಪ
ಗಂಡೆಳ್ಳಿ ಮೊದಲ ಬಲಗೊಂಡ

ಎಂದು ಹಾಡಿರುವುದು ವಾತ್ಸಲ್ಯ ಭಕ್ತಿಯ ಸುಂದರ ಅಭಿವ್ಯಕ್ತಿಯಾಗಿದೆ. ಜನಪದ ಮನಸ್ಸು ಸೂಕ್ಷ್ಮವಾಗಿ ಪ್ರಕೃತಿಯನ್ನು ನಿರೀಕ್ಷಿಸುವಂತಹದು. ನಮ್ಮೆಲ್ಲರ ಪ್ರಾಣವಾಗಿರುವ ಪ್ರಾಣವಾಯು ಅವರಿಗೆ ಒಬ್ಬ ದೇವರಾಗಿ ಕಂಡಿದ್ದರೆ ಅದರಲ್ಲಿ ಅಚ್ಚರಿಯೇನಿಲ್ಲ. ವಾಯುದೇವನನ್ನು ಕುರಿತಾದ ಸ್ತುತಿ ಶಿಷ್ಟ ಸಾಹಿತ್ಯದಲ್ಲಿ ಕಾಣುವುದು ಅಪರೂಪ. ಜನಪದರ ಗಾಳೀದೇವನ ಸ್ತುತಿಯ ನುಡಿಯೊಂದು ಹೀಗಿದೆ:

ಸುತ್ತಾಡಿ ಬೀಸುವ ಜೀವಲೋಕದ ಉಸಿರು
ಗಾಳಿ ದೇವಯ್ಯ ಬಲಗೊಂಡೆ ।ಕೋ। ಜೀವಕೋಟಿ
ಜೀವಾಳ ನಿನ್ನ ಬಲಗೊಂಡೆ । ಕೋ.

ಭೂಮಿ, ಗಣಪತಿ, ಸರಸ್ವತಿ, ಸೂರ್ಯ, ಚಂದ್ರ, ಗಾಳಿ ಇವರು ಸ್ತುತಿಗೊಂಡಿರುವ ಮುಖ್ಯದೇವತೆಗಳು. ಅಲ್ಲಲ್ಲಿಯ ಸ್ಥಳೀಯ ದೇವತೆಗಳ ಬಗ್ಗೆ ಅಸಂಖ್ಯ ಸ್ತುತಿಪದಗಳಿವೆ. ನಮ್ಮ ಗ್ರಾಮೀಣ ಪ್ರಪಂಚ

ದಲ್ಲಿ ಎಷ್ಟು ಜನ ದೇವತೆಗಳಿರುವರೋ ಅವರೆಲ್ಲರನ್ನು ಕುರಿತು ಸ್ತುತಿಗಳಿರುವುದು ಸಾಮಾನ್ಯ ಸಂಗತಿಯಾಗಿದೆ.

೩. ದೇವತಾ ವರ್ಣನೆ

ತಮ್ಮ ಇಷ್ಟ ದೇವತೆಗಳನ್ನು ಜಾನಪದರು ಮನದುಂಬಿ ಹಾಡಿ ಹೊಗಳಿದ್ದಾರೆ. ನಾನಾ ವಿಧವಾಗಿ ವರ್ಣಿಸಿದ್ದಾರೆ. ಈ ವರ್ಣನೆಗಳು ಶಿಷ್ಟ ಸಾಹಿತ್ಯದಲ್ಲಿ ಹೆಚ್ಚಾಗಿ ಕಾಣುವ ಒಣ ಶಬ್ದಾಡಂಬರ, ಕ್ಲೀಷೆಯಾಗಿರುವ ಪದಪುಂಜ ಮುಂತಾದವುಗಳನ್ನೊಳಗೊಂಡ ಕೃತಕ ರಚನೆಗಳಂತಿರದೆ ಸಹಜ ಸುಂದರವಾಗಿವೆ. ಇವುಗಳ ಭಾವ, ಭಾಷೆ ಎರಡೂ ಸರಳ ಮತ್ತು ನಿರಾಡಂಬರ. ಒಬ್ಬೊಬ್ಬ ದೇವತೆಯ ಬಗ್ಗೆ ಎಷ್ಟೆಷ್ಟೋ ವರ್ಣನಾ ಪದ್ಯಗಳು ಪ್ರಚಲಿತವಿವೆ. ಎಷ್ಟು ವರ್ಣಿಸಿ ಹಾಡಿದರೂ ತೃಪ್ತಿಗಾಣದ ಜನಪದ ಪ್ರತಿಭೆ ಅಗಾಧವಾದುದು. ಈ ಬಿಡಿ ಹಾಡುಗಳನ್ನು ಸ್ವತಂತ್ರವಾಗಿ ಹಾಡುವರು. ಅಲ್ಲದೆ ತಮ್ಮ ವೃತ್ತಿ ಪರ ಹಾಡುಗಳ ಮಧ್ಯದಲ್ಲಿ ಆಗಾಗ ಹಾಡುವರು. ಕೆಲವು ದೇವತೆಗಳ ಮಹಿಮೆ, ಪವಾಡ, ಲೀಲೆಗಳನ್ನು ಕುರಿತು ದೀರ್ಘ ಕವನಗಳನ್ನು ಕಟ್ಟಿ ಹಾಡುವದೊಂದು ಸಂಪ್ರದಾಯವಾಗಿ ಬೆಳೆದು ಬಂದಿದೆ. ಅಂಥಲ್ಲಿ ಸನ್ನಿವೇಶ ಏನೇ ಇದ್ದರೂ ಅದು ಕೊನೆಗೆ ಬಂದು ನಿಲ್ಲುವ ನಿಲುಗಡೆ ಭಕ್ತಿಯೇ. ಕೆಲವು ಪ್ರಾತಿನಿಧಿಕ ದೇವತಾ ವರ್ಣನೆಯ ಹಾಡುಗಳನ್ನು ನೋಡಬಹುದು.

ಶಿವ:– ನಂದಿನೇರಿದ ಶಿವನೆ ಕೆಂಜೆಡಿಯ ಧರಿಸ್ಯಾರೆ
ಗಂಗಿ ಜಡಿವೊಳಗ ಮುಡಿಗ್ಯಾರೆ । ಕೈಲಾಸ್ದ
ಲಿಂಗವೇ ಬಾ ನಮ್ಮ ವಚನಕ್ಕೆ

ಶಿವನನ್ನು ಅವನ ಹೆಂಡತಿಯರಾದ ಗಂಗೆ ಗೌರಿಯರನ್ನು ಜಾನಪದ ಸಾಹಿತ್ಯದಲ್ಲಿ ವಿಶೇಷವಾಗಿ ವರ್ಣಿಸಲಾಗಿದೆ. ಅವರೆಲ್ಲ

ಇಲ್ಲಿ ಸಾಮಾನ್ಯರಾಗಿದ್ದಾರೆ. ಶಿವನನ್ನು ನೇರವಾಗಿ ವರ್ಣಿಸಿರುವು ದಲ್ಲದೆ, ಅವನು ಬೇರೆ ಬೇರೆ ಹೆಸರುಗಳಿಂದ ಬೇರೆ ಬೇರೆ ಸ್ಥಳಗಳಲ್ಲಿ ನೆಲೆಸಿರುವುದನ್ನು ಭಕ್ತರು ಸುಂದರವಾಗಿ ವರ್ಣಿಸಿದ್ದಾರೆ.

ಮಲ್ಲಯ್ಯ :– ಗುಡ್ಡದ ಮಲ್ಲಯ್ಯ ಗುಡಿಯಲ್ಲಿ ಬಂಗಾರ
ಹಾಸಿಗೆ ಗಲ್ಲು ಹವಳಾವು। ಮಲ್ಲಯ್ಯ
ಬೀಸಣಿಕೆಗೆಲ್ಲ ಬಿಡಿ ಮುತ್ತು ॥

ವಿರೂಪಾಕ್ಷ :– ಹಾಂವು ಅಂದರ ಜೀವ ಹರಣವ ಹಾರ್‍ಯಾವ
ಹಾಂವಲ್ಲ ಹಂಪಿ ವಿರೂಪಾಕ್ಷ। ನಿನಮುಂದ
ಹಾಂವಾಗಿ ಗಂಗಿ ಹರದಾಳ.

ಕರ್ನಾಟಕದಲ್ಲಿ ವೀರಭದ್ರನ ಉಪಾಸನೆ ಬಹುದಿನಗಳಿಂದ ನಡೆದು ಕೊಂಡು ಬಂದಿದೆ. ಬಹುಶಃ ವೀರಭದ್ರನನ್ನು ಕನ್ನಡಿಗರಷ್ಟು ಇತರರಾರೂ ಗೌರವಿಸಿದಂತಿಲ್ಲ. ಅವನಿಲ್ಲಿ ಜಾನಪದ ದೇವತೆ ಯಾಗಿದ್ದಾನೆ. ಅವನ ಉಪಾಸಕರು ಮದುವೆಯ ಕಾರ್ಯ ನಡೆದಾಗ "ಗುಗ್ಗಳ" ಸೇವೆ ನಡೆಸುವುದು ಸರ್ವ ವಿದಿತವಾದ ಸಂಗತಿಯಾಗಿದೆ. ಆಗ ಅವನ ಉಗ್ರರೂಪ ಲೀಲೆಗಳು ಒಡಪುಗಳನ್ನು ಗಂಡು ಭಾಷೆ ಯಲ್ಲಿ ಹೇಳಿ ಮೈ ನವಿರೇಳುವಂತೆ ಮಾಡುವ ಪುರವಂತರ ಸಂಪ್ರ ದಾಯ ಈ ನಾಡಿನಲ್ಲಿ ಬೆಳೆದುಕೊಂಡು ಬಂದಿದೆ. "ಗುಗ್ಗಳ" ನಡೆ ದಾಗ ಹೇಳುವ ಈ ಒಡಪುಗಳು ಪೌರಾಣಿಕ ಆಖ್ಯಾಯಿಕೆ, ಸಾಮಾ ಜಿಕ ವಿಚಾರ, ವೀರಶೈವಧರ್ಮ ತತ್ವ ಮುಂತಾದವುಗಳನ್ನು ಒಳ ಗೊಂಡಿದ್ದರೂ ಬಹುಪಾಲು ಒಡಪುಗಳು ವೀರಭದ್ರನ ಜನನ, ಕಾರ್ಯ, ಲೀಲೆಗಳನ್ನೇ ವಿವರಿಸುತ್ತವೆ. ಉದಾಹರಣೆಗಾಗಿ ಒಂದನ್ನು ಹೇಳುವುದಾದರೆ:

ನಮ್ಮ ಶ್ರೀ ವೀರಭದ್ರ ದೇವರು ಹುಟ್ಟಿದಾಗಲೇ ಹೂವಿನ ಕಾಶಿ, ವಿಷ್ಣು ಕಾಶಿ. ಬ್ರಹ್ಮ ಕಾಶಿ, ಮೆಟ್ಟುವ ಹೊನ್ನಿನ ಆವಿಗೆ, ಸಾವಿರ ಶಿರಸ್ಸು. ಮೂರು ಸಾವಿರ ಕಣ್ಣು, ಎರಡು ಸಾವಿರ ಭುಜ. ಜಂಜುವೇಶ ಮುಂಗಲಿ ಜಟಾ ಉರುಲು. ಶೆಡಕಿನ ಹಗ್ಗಾ, ಗಜ ದಾಂಡು, ಗಜಾಂಕುಶ, ಚಪ್ಪಗೊಡಲಿ. ಚಿನ್ನವೀರಭದ್ರ ಬತ್ತೀಸ ಆಯುದ ಪಿಡಿದು ಕರಗಸದ ಬಾಣ ಕುಂಜರದ ಬಾಕು, ಜುಂಜು ಬಿರಿಗಣ್ಣು, ಬಿಲ್ಲುದರಿನ ಪೆಗ್ಗಾಳಿ ಪಿಡಿಯೋ ಗಂಡುಗತ್ತರಿ ಕೈ ಯೆಂಬ ಕಠಾರಿ, ಈಟಿ ರಣಚೂರಿ, ರೌದ್ರಾಕಾರದಿಂದ ಹೂಂಕರಿ ಸುತ್ತ, ಕೋಲಲಯೆಂದು ಹರಿದು ಹೋಮಕ್ಕೆ ಬಂದು, ವಿಷ್ಣುವೇ ಮೊದಲಾದ ದೇವತೆಗಳನ್ನು ಸೆರೆಹಿಡಿದ ದಕ್ಷಬ್ರಹ್ಮನ ಶಿರವನ್ನು ಅಗ್ನಿಗೆ ಆಹುತಿಕೊಟ್ಟು, ಸರಸ್ವತಿಯ ಮೂಗನೇ ಕೊಯ್ದು, ಅಗ್ನಿಯ ನಾಲಿಗೆ ಹರಿದು ಸಪ್ತ ಭಾಗ ಮಾಡಿ ಅರವತ್ತಾರು ಕೋಟಿ ರಾಕ್ಷಸರನ್ನು ಕೆಂಗಣ್ಣಿನಿಂದ ಸುಟ್ಟು, ಕೆಂಡದ ಓಕಳಿಯನ್ನು ಹಾಕುತ್ತಾ ಬರುತ್ತಿರಲು, ದಕ್ಷನ ಸತಿಯು ಬಂದು ಪಾದಕ್ಕೆ ಎರಗಲು, ಆಗ ನಮ್ಮ ಶ್ರೀ ವೀರಭದ್ರನು ಅವಳ ಪತಿಗೆ ಕುರಿ ತಲೆ ಯನ್ನಿಟ್ಟು, ಕೈಲಾಸಕ್ಕೆ ಬಂದುದನ್ನು ಕಂಡು, ಶಿವನು ಭಪ್ಪರೆ ಭಲರೆ ಎಂದು ರತ್ನಕೆಚ್ಚಿದ ಸಿಂಹಾಸನದ ಮೇಲೆ ಕೂಡ್ರಿಸಿ ಹೂಮಳೆಗರೆದನು ಕಡೆ ಕಡೆ."

ಪುರವಂತರ ವರ್ಣನೆಯಲ್ಲಿ ರೌದ್ರರಸ ಉಕ್ಕಿ ಹರಿಯುತ್ತದೆ. ಇತರ ಬಿಡಿ ಹಾಡುಗಳಲ್ಲಿ ಶಾಂತರಸವನ್ನು ಕಾಣಬಹುದಾಗಿದೆ.

ಕಣ ಬಟ್ಟ ಕೋಮಿರ್ಣೀಸಿ, ಕಂಡರಂಜಿಕೆ ಬರೀವ
ಮುಂಜಾನದಾಗ ನೆನದಾರ, ವೀರಭದ್ರ
ತುಂಬಿದಾರೂತಿ ತರುವೇನ.

ವೀರಭದ್ರನ ಉಗ್ರರೂಪವನ್ನು ತೀರಾ ಸಂಕ್ಷಿಪ್ತವಾಗಿ ಈ ಹಾಡಿನಲ್ಲಿ ಹೇಳಲಾಗಿದೆ. ಅವನನ್ನು ಕಂಡು ಅಂಜಿಕೆ ಬರುವಂತಿದ್ದರೂ ಅದು ಕ್ಷಣಿಕವಾದುದು. ಅವನಿಗೆ ತುಂಬಿದಾರುತಿಯ ಸೇವೆ ತಪ್ಪಿದ್ದಲ್ಲ.

ಹಣ್ಣು ಹಂಪಲ ತಿಂದ ಕಣ್ಣ ಕೆಂಪಗ ಮಾಡಿ
ನನ್ನ ನೋಡ್ಯಾರ ಕಿಡಿಗಣ್ಣ । ಎಡೂರ
ಈರಣ್ಣ ನಿನ್ನರಕೆ ಮರೆತಿಲ್ಲ. ।

ಎಂದು ಹೇಳುವಲ್ಲಿ ಭೀತಿ-ಪ್ರೀತಿಗಳೆರಡೂ ಒಡಮೂಡಿವೆ. ಕರ್ನಾಟಕದಲ್ಲಿ ವೀರಭದ್ರನ ಕ್ಷೇತ್ರಗಳು ಸಾಕಷ್ಟಿವೆ. ಅಲ್ಲಿಯ ಜನರು ಆಯಾ ಊರ ವೀರಭದ್ರನನ್ನು ಕುರಿತು ಭಕ್ತಿಯಿಂದ ಹಾಡಿದ್ದಾರೆ.

ಹನುಮಂತ :– ಬಹುಶಃ ಹನುಮಂತನಿಲ್ಲದ ಹಳ್ಳಿ ನಮ್ಮ ನಾಡಿನಲ್ಲಿ ಕಾಣಲಿಕ್ಕಿಲ್ಲ. ಊರ ಹೊರಗಿದ್ದು ಊರ ರಕ್ಷಣೆ ಮಾಡುವುದು ಹನುಮಂತನ ಜವಾಬ್ದಾರಿ. ಕೆಲವು ಊರ ಹನುಮಂತ ದೇವರುಗಳು ಹೆಚ್ಚು ಪ್ರಚಾರಗಳಿಸಿದ್ದಾರೆ. ಇನ್ನು ಹಲವು ಕಡೆ ಪ್ರತಿವರ್ಷ "ಓಕಳಿ", ಎಂಬ ಹೆಸರಿನಿಂದ ಹನುಮಂತ ದೇವರ ಉತ್ಸವ ನಡೆಸುತ್ತಾರೆ. ಹಳ್ಳಿಯ ಹೆಣ್ಣು ಗಂಡು ಎಲ್ಲರಿಗೂ ಪ್ರಿಯವಾದ ಈ ಹನುಮಂತನನ್ನು ಕುರಿತು ಸಾಕಷ್ಟು ಹಾಡುಗಳು ರಚನೆಗೊಂಡಿವೆ.

ಕರಿಯ ಕಲ್ಲಾಗಿರುವ್ನೋನೆ ಕರೆದರೆ ಓಯನ್ನೋನೆ
ಜೇನಿಕ್ಕಿದಂಗೆ ಚೆವ್ವರೋನೆ । ಹನುಮಯ್ಯ
ಗೇನಿಗ ನಮ್ಮೇಲೆ ದಯವಿರಲಿ.

ಈ ಹಾಡಿನಲ್ಲಿ ಹನುಮಂತನ ಆಕಾರವನ್ನು, ಅವನು ಜೇನಿಕ್ಕಿದಂಗೆ ಬೆವರುವುದನ್ನು ಸುಂದರವಾಗಿ ಚಿತ್ರಿಸಲಾಗಿದೆ.

ಹನುಮಂತನೆಂಭೋನು ಪುಂಡ–ಆ ಸ್ವಾಮಿ
ಹೂಡ್ಯಾನು ಮೂರೊಲಿ ಗುಂಡ
ಅಡಿಗೆಯ ಮಾಡಿಕೊಂಡುಂಡ–ಲಂಕೀಗಿ
ತೋರ್ಯಾನು ಬೆಂಕಿಯ ಕೆಂಡ.

ಎಂದು ಹೇಳುವಲ್ಲಿ ಅವನ ಮಹಿಮೆ, ಬ್ರಹ್ಮಚಾರಿಯಾಗಿ ಕೈಬಾಯಿ ಸುಟ್ಟುಕೊಂಡುದನ್ನು ಸರಳವಾಗಿ ವಿವರಿಸಲಾಗಿದೆ.

ಜೋಕುಮಾರ :- ಜೋಕುಮಾರನ ಸಂಪ್ರದಾಯ ಕರ್ನಾಟಕದ ವೈಶಿಷ್ಟ್ಯವಾಗಿದೆ. ಇವನ ಬಗ್ಗೆ ಹಲವಾರು ಕಥೆಗಳು ಪ್ರಚಾರದಲ್ಲಿವೆ. ಇವನು ಮಳೆತಂದು ಕೊಡುವ ದೇವತೆಯಾದು ದರಿಂದ ರೈತರಿಗೆ ಇವನ ಬಗ್ಗೆ ಹೆಚ್ಚು ಗೌರವ, ಜೋಕುಮಾರ ಹುಣ್ಣಿಮೆಯಲ್ಲಿ ಇವನನ್ನು ಹೊತ್ತು ತಿರುಗುವ ಹೆಣ್ಣು ಮಕ್ಕಳದು ಒಂದು ಪರಂಪರೆ ರೂಢಿಗೊಂಡಿದೆ. ಅವರು ಜೋಕುಮಾರನ ಮಹಿಮೆಯನ್ನು ಹೀಗೆ ಹೆಮ್ಮೆಯಿಂದ ಹಾಡಿ ಹೊಗಳುತ್ತಾರೆ.

ಅಡ್ಡಡ್ಡ ಮಳಿಬಂದ ದೊಡ್ಡೊಡ್ಡ ಕೆರಿತುಂಬಿ
ಗೊಡ್ಡುಗಳೆಲ್ಲ ಹೈನಾಗಿ । ಗೌಡರ
ಸೆಡ್ಡಿಯ ಮೇಲೆ ಸಿರಿಬಂದು ॥ ಜೋಕುಮಾರಾ॥
ಹಾಸ್ಯಾಸಿ ಮಳಿಬಡದು । ಬೀಸ್ಬೀಸಿ ಕೆರೆತುಂಬಿ
ಬಾಸಿಂಗದಂತೆ ತೆನಿಬಾಗಿ . ಗೌಡರ
ರಾಸಿಯಮ್ಯಾಲ ಸಿರಿಬಂದ । ಜೋಕುಮಾರಾ,

ಎಲ್ಲವ್ವ :- ಕರ್ನಾಟಕದ ಸ್ತ್ರೀ ದೇವತೆಗಳಲ್ಲೆಲ್ಲ ಎಲ್ಲವ್ವ ಹೆಚ್ಚು ಪ್ರಚಾರದಲ್ಲಿರುವಂಥ ದೇವತೆ. ಅವಳ ಭಕ್ತರ ಸಂಖ್ಯೆ ಅಪಾರ. ಆದುದರಿಂದ ಅವಳನ್ನು ಕುರಿತಾದ ಸಾಹಿತ್ಯವೂ ಅಪಾರ. ಎಲ್ಲವ್ವನ ಕಟ್ಟಾ ಉಪಾಸಕರಾಗಿ ತಲೆಯ ಮೇಲೆ ಜಗಾ ಹೊತ್ತು ತಿರುಗುವ ಜೋಗತಿಯುವರಿಗೆ ತಮ್ಮ ಇಷ್ಟದೈವವನ್ನು ಹಾಡಿ ಹೊಗಳುವುದೇ ಮುಖ್ಯ ಕಾಯಕ. ಜೋಗತಿಯರು ತಮ್ಮ ಹಾಡುಗಳ ವೈಶಿಷ್ಟ್ಯದಿಂದಾಗಿ ಕನ್ನಡ ಜಾನಪದ ಕಾವ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಹೆಚ್ಚಾಗಿ ಲಾವಣಿ ಬಂಧಗಳನ್ನು ಹೋಲುವ ಜೋಗತಿಯರ ಹಾಡುಗಳು ಚೌಡಿಕಿಯ ಶ್ರುತಿಲಯಕ್ಕೆ ಹೊಂದುವಂತಿರುತ್ತವೆ. ಉದಾಹರಣೆಗಾಗಿ ಒಂದು ಹಾಡನ್ನು ನೋಡಬಹುದು.

ಸಣ್ಣಾಕೆಲ್ಲವ್ವ ನೀನು

ಅನಂತ ರೂಪವ ತಾಳಿದಾಕಿ
ಸಣ್ಣಾಕೆಲ್ಲವ್ವ ನೀನು ಗುಡ್ಡದ ಎಲ್ಲವ್ವಾ ೧
ಭಕ್ತರ ಮನೆಯೊಳು ನಿತ್ತ್ಯರುವಾಕಿ
ನಿತ್ಯನಿರಂಜನ ತೋರುವಾಕಿ
ಸಣ್ಣಾಕೆಲ್ಲವ್ವ ನೀನು ಗುಡ್ಡದ ಎಲ್ಲವ್ವಾ ೨
ಉಧೋ ಉಧೋ ಎಂಬುವ ಭಕ್ತರ ನೀನು ಕಾಯಾಕಿ
ದುಷ್ಟ ಮಾನವರನ್ನು ದೂರಮಾಡುವಾಕಿ
ಸಣ್ಣಾಕೆಲ್ಲವ್ವ ನೀನು ಗುಡ್ಡದ ಎಲ್ಲವ್ವಾ ೩
ದುಷ್ಟ ಕಾರ್ತವೀರನ್ನ ತಲೆಯ ಕಡಿಸಿದಾಕಿ
ಅವತಾರ ಧಾರಣ ಮಾಡಿದೆವ್ವ

ಸಣ್ಣಾಕೆಲ್ಲವ್ವ ನೀನು ಗುಡ್ಡದ ಎಲ್ಲವ್ವಾ ೪

ಭಕುತರಉದ್ಧಾರ ಮಾಡುವ್ರದಕ
ಏಳು ಕೊಳ್ಳಕೆ ಬಂದೆವ್ವ
ಸಣ್ಣಾಕೆಲ್ಲವ್ವ ನೀನು ಗುಡ್ಡದ ಎಲ್ಲವ್ವಾ ೫

ದರೆಯೊಳು ಕಲ್ಲೂರ ಮಲ್ಲಿಕಾರ್ಜುನಗೆ
ಮಗಳಾಗಿ ನಡೆದೆವ್ವಾ ನೀ
ಸಣ್ಣಾಕೆಲ್ಲವ್ವ ನೀನು ಗುಡ್ಡದ ಎಲ್ಲವ್ವಾ. ೬

ಬಸವಣ್ಣ :– ಒಕ್ಕಲುತನ ನಮ್ಮ ಹಳ್ಳಿಗರ ಮುಖ್ಯ ಕಾಯಕ. ಅದಕ್ಕಾಗಿ ರೈತನು ಎತ್ತುಗಳನ್ನು ಬಹಳಷ್ಟು ಅವಲಂಬಿಸಿದ್ದಾನೆ. ಆದರೆ ಅವನಿಗೆ ಎತ್ತುಗಳು ಪ್ರಾಣಿಗಳಲ್ಲಿ ದೇವರು–ಬಸವಣ್ಣ, ಬಸವಣ್ಣನನ್ನು ಕುರಿತು ಹಾಡಿರುವ ರೈತರ ಹಾಡುಗಳಿಗೆ ಲೆಕ್ಕವಿಲ್ಲ. ಯಾತದ ಪದ ಮತ್ತು ಹಂತಿಯ ಪದಗಳಲ್ಲಿ ಈ ಹಾಡುಗಳ ಪ್ರಮಾಣ ಅಧಿಕ.

ತುಂಬೀದ ಹೊಳೆಯಾಗ ಕೊಂಬ ಕಾಣಿಸತಾವ
ಇಂಬುಳ್ಳ ಇಣಿಯ ಬಸವಣ್ಣ । ಬರುವಾಗ
ಗಂಗೆದ್ದು ಕೈಯ್ಯ ಮುಗದಾಳ
ಬಸವನ ದಂತೀಲಿ ನವರತ್ನ ಉದಯಾಗಿ
ಜೊಲ್ಲಲಿ ರತ್ನಾ ಹವಳಾಗ್ಯೋ । ಬಸವಣ್ಣ
ಪೃತಿವಿಯ ಮ್ಯಾಲ ಬೆಳಕಾಗ್ಯೋ

ರೈತರಿಗೆ ಬಸವಣ್ಣನ ಬಗ್ಗೆ ಅಕ್ಕರತೆ, ಅಭಿಮಾನಗಳು ಎಷ್ಟೆಂಬುದು ಈ ಹಾಡುಗಳಿಂದ ಗೊತ್ತಾಗುತ್ತದೆ. ಬಸವಣ್ಣನ ಬಗ್ಗೆ ರೈತರ ಪಾಲಿಗಷ್ಟೇ ಅಲ್ಲ. ಮನೆಯ ಗರತಿಯರ ಪಾಲಿಗೂ ಇದೆ. ಅವರ ಶ್ರದ್ಧೆಯಲ್ಲಿ ಬಸವ ಸೇವೆಯೂ ವಿಶಿಷ್ಟವಾದುದು :

ಕಸವ ಬಳಿಯುವ ಕೈ ಕಸ್ತೂರಿ ನಾತವ
ಬಸವ ನಿನ್ನ ಸಗಣಿ ಬಳದರ । ಕೈಗಳು
ಯಾಲಕ್ಕಿ ನಾತ ನಾರ್‍ಯಾವೊ.

ಬಸವಣ್ಣನ ಗುಡಿ ಕಟ್ಟಿ ವರ್ಷಕ್ಕೊಮ್ಮೆ ಜಾತ್ರೆ ಮಾಡು ವುದು ಸಾಮಾನ್ಯ. ಆದರಲ್ಲಿಯೂ ಕೆಲವು ಊರಿನ ಬಸವಣ್ಣ ತುಂಬಾ ಪ್ರಸಿದ್ಧ. ಅವರವರನ್ನು ಕುರಿತು ಅಲ್ಲಲ್ಲಿಯ ಜನ ಮನ ದುಂಬಿ ಹಾಡಿದ್ದಾರೆ. ಒಂದು ಯಾವುದೋ ಊರ ಕೆರೆಯ ಮಧ್ಯ ದಲ್ಲಿರುವ ಬಸವಣ್ಣನ ಮೂರ್ತಿಗೆ ಭಕ್ತ ಹೃದಯ ಕೇಳುತ್ತದೆ.

ಕರಿಯ ಕೋಡಿನ ಬಸವ ಕೆರಿಯಾಗ ಹ್ಯಾಂಗಿದ್ದಿ
ಕೆರಿ ಬತ್ತಿ ಸಣ್ಣ ಮಳಲೊತ್ತಿ । ಭಕ್ತರ
ಹಣಿ ಒತ್ತಿ ಪಾದ ಸವೆದಾವೋ ।

ಬೇರೆ ಬೇರೆ ಊರುಗಳ ಬಸವಣ್ಣರ ವರ್ಣನೆಗಳಲ್ಲಿ ಎರಡನ್ನೂ ಇಲ್ಲಿ ಗಮನಿಸಬಹುದು.

ಬಾಗೇವಾಡಿಯ ಬಸವ ಬಹಳ ದೊಡ್ಡವನೆಂದು
ಬೆಳ್ಳಿಯ ಮುಗಡ ಮಾಡ್ಯೇನೊ । ಬಸವಣ್ಣ
ಹೊನ್ನ ಹಣಿಕಟ್ಟಿ ಬಿಸಿಸೇನೊ.॥
ಚೆಂದುಳ್ಳ ಪಟ್ಟದ ಕಲ್ಲು ಇಂಬುಳ್ಳ ಗುಡಿಯಾಗ
ಮಂದಾಸ ಬಸವ ಮಲಗ್ಯಾನ । ಗುಡಿಮುಂದ
ಕಂದನ ಬೇಡುವವರು ಕಡೆಯಿಲ್ಲೊ ॥

ಇತರ ದೇವರ ಬಗ್ಗೆ, ಗ್ರಾಮ ದೇವತೆಗಳ ಬಗ್ಗೆ ಮಹಾತ್ಮರ ಬಗ್ಗೆ ರಚನೆಯಾದ ಭಕ್ತಿ ಪೂರ್ವಕವಾದ ವರ್ಣನೆಗಳು ಲೆಕ್ಕಕ್ಕೆ

ಮೀರಿದವುಗಳಾಗಿವೆ. ಅವುಗಳಲ್ಲಿ ಕೆಲವನ್ನು–ಒಂದೊಂದು ಹಾಡಿನ ಮೂಲಕ – ಅರಿತುಕೊಳ್ಳಬಹುದಾಗಿದೆ.

ರಾಚಣ್ಣ :– ಕಪ್ಪೂರ ಬೆಳಕೀಲಿ ಗುಗ್ಗಳ ಹೊಗಿಯಲಿ
ಅಪ್ಪ ರಾಚಣ್ಣ ಬೆವತಾನ ! ಪೂಜ್ಯಾರಿ
ಮುತ್ತಿನ ಚೌರಿ ನೀ ಬೀಸೋ.

ವಿಠ್ಠಲ :– ಅಂಗಳದಾಗ ನಿಂತೀನಿ ರಂಗ ನಿನ್ನ ಕರದೀನಿ
ಅಂಗೈಯಾಗ ತುಳಸಿ ಹರಿನಾಮ । ಪಂಡರಪೂರ
ರಂಗ ಬಾ ಎಂದು ಕರದೀನ

ಬನದಮ್ಮ :– ಬಿತ್ತೀದ ಹೊಲದಾಗ ಒತ್ತಿ ಹಾಯಾಕಿ ಯಾರ
ಮುತ್ತಿನುಡಿಯಕ್ಕಿ ಬನದಮ್ಮ! ಹಾಯ್ದರ
ಬಿಚ್ಚಿಬಿದ್ದಾವ ಬಿಳಿಜೋಳ

ದ್ಯಾಮವ್ವ :– ಸತ್ಯುಳ್ಳ ದ್ಯಾಮವ್ವ ಮುತ್ತೀನ ಉಡಿಯಕ್ಕಿ
ಹೊತ್ತೇರಗೊಡದೆ ದಿನ ಪೂಜೆ । ನಿನ ಮುಂದ
ಮತ್ತ್ಯಾರ ಆಟ ನಡಿಯಾವ,
ಆಕೆ ದ್ಯಾಮವ್ವನ ತೆಕ್ಕ ತುರುಬಿನ ಮೇಲೆ
ಸುತ್ತಿ ಹಾಕ್ಯಾಳ ಸರ್ಪಾವ ನೋಡವಳಂದವಾ
ಸುತ್ತಿ ಹಾಕ್ಯಾಳೆ ಸರ್ಪಾವ ಕಾಳಿಂಗನ
ಹೆಡೆಯ ತಿದ್ದ್ಯಾಳೆ ನೇರಿಗೀಲೀ.

ಕರಿಯವ್ವ :– ಗದ್ದುಗೇ ಮೇಲಿಂದ ಎದ್ದು ಬಾರೆ ಕರಿಯವ್ವ
ಅಲ್ಲಿದ್ದರೆ ನಿನಗ ಶಿವನಾಣೆ–ಸಿರ್ಯಾವ್ದ
ಮಗ್ಗು ಬಂದಾವೇ ಮಡಿಬಾರೆ

ತಿಮ್ಮಪ್ಪ:- ಹಟ್ಟಿಗ್ಹಿಂದಾಗಿ ಕಟ್ಟೇಗೆ ಇದಿರಾಗಿ
ಬಟ್ಟಾನಿಡೋರು ಇವರ್ಯಾರು-ಮೂಡಲ
ಬಟ್ಟಾನೆ ಮುಖದ ಮನಿಸ್ವಾಮಿ-ಗೋವಿಂದಾ.

ಮಡಿವಾಳಪ್ಪಾ :- ಹಾಸಗಲ್ಲಿನ ಮ್ಯಾಲ ಹಾದ ಹೋದವರ್ಯಾರ
ಪಾದ ಮೂಡ್ಯಾವ ಪರಿಪರಿ । ಮಡಿವಾಳ
ಸ್ವಾಮಿ
ಹಾದ ಹೋದಾರ ಜಳಕಕ್ಕ .

೪. ಮಳೆರಾಯ

ಪ್ರಕೃತಿ ಶಕ್ತಿಗಳು ತಮ್ಮ ಅದ್ಭುತ ಶಕ್ತಿ ಪ್ರಭಾವಗಳಿಂದಾಗಿ ಜಾನಪದರ ಮುಗ್ಧ ಮನಸ್ಸಿಗೆ ದೇವರಾಗಿ ಕಂಡದ್ದು ಸಹಜವೇ. ಮಳೆ ಈ ಶಕ್ತಿಗಳಲ್ಲಿ ನಮ್ಮ ರೈತರಿಗೆ ಬಹಳಷ್ಟು ಮಹತ್ವದ್ದಾಗಿ ಕಂಡಿದೆ. ನಮ್ಮ ದೇಶ ಇಲ್ಲಿಯುವರೆಗೆ ವ್ಯವಸಾಯಕ್ಕೆ ಪೂರ್ತಿಯಾಗಿ ಮಳೆಯನ್ನೇ ನಂಬಿತ್ತು. ಮಳೆ ಬೀಳುವುದರಲ್ಲಿ ಆಗುವ ಅಲ್ಪ ವ್ಯತ್ಯಾಸ ಆತನ ವರ್ಷದ ಜೀವನವನ್ನೇ ಅಲ್ಲೋಲ ಕಲ್ಲೋಲ ಮಾಡುತ್ತದೆ. ಆದ್ದರಿಂದ ಮಳೆ ಅವನಿಗೆ ತೀರ ಹತ್ತಿರದ, ಅವನ ಬದುಕಿಗೆ ನೇರವಾಗಿ ಸಂಬಂಧಿಸಿದ, ಮತ್ತು ಪ್ರತ್ಯಕ್ಷವಾಗಿ ಹಾಗೂ ಅಪ್ರತ್ಯಕ್ಷವಾಗಿ ಅವನನ್ನು ಆಳುವ ಶಕ್ತಿಯಾಗಿದೆ. ಪರಿಸ್ಥಿತಿ ಹೀಗಿರುವಾಗ ಮಳೆ ಇನ್ನುಳಿದ ದೇವರಿಗಿಂತ ಹೆಚ್ಚಿನದಾಗಿ, ಮಹತ್ವದ್ದಾಗಿ ಕಂಡದ್ದರಲ್ಲಿ ಆಶ್ಚರ್ಯವಿಲ್ಲ. ಮಳೆರಾಯನನ್ನು ಭಯ-ಭಕ್ತಿಯಿಂದ ಹಾಡಿ ಹೊಗಳಿದ್ದಾರೆ.

ಕೆಂದಗುದರೀ ಮ್ಯಾಲ ದುಂದಲೆ ಬರವನ್ಯಾರ
ಕೆಂದೂಳ ದೊರಿಯು ಮಳೆರಾಜ । ಬಂದರ ನನ್ನ

ಕಂದವುಗೋಳ ಕೈಯ ಮುಗದಾರ.
ರಾಗೀ ಬಣ್ಣದ ಕುದರಿ ರಾಜೇಕ ಮೊಡ್ಡದು
ರಾಜರೊಳು ರಾಜ ಮಳೆರಾಜ । ಬರುವಾಗ
ರಾಜೀವ ಕೈಯ ಮುಗದಾವ. ।

ಹೀಗೆ ಮಳೆರಾಯನನ್ನು ಬಣ್ಣಿಸಲಾಗಿದೆ. ಅವನ ಅವಕೃಪೆ ಎಂಥ ದುರಂತಕ್ಕೆ ಕಾರಣವಾಗಬಲ್ಲದೆಂಬುದನ್ನು ವಿವರಿಸುವ ಕೆಲವು ಹಾಡುಗಳಂತೂ ಕರುಳು ಕರಗಿಸುವಂತಿವೆ. ಬರಗಾಲ ಈ ದೇಶಕ್ಕೆ ಅಪರಿಚಿತವೇನೂ ಅಲ್ಲ. ಅದರ ತಾಪದಲ್ಲಿ ಬೆಂದು ನೋವನ್ನುಂಡ ಬಡಜೀವಿಗಳ ಹೃದಯದ ಹಂಬಲ ಹಾಡಾಗಿ ಮೂಡಿ ಮಳೆ ರಾಯನನ್ನು ನೆನೆಸಿದೆ.

ಒಕ್ಕಲಗೇರ್‍ಯಾಗ ಮಳೆರಾಯಾ । ಮಕ್ಕಳ ಮಾರ್‍ಯಾರ ಮಳೆ ರಾಯಾ ।
ಮಕ್ಕಳ ಮಾರಿ ರೊಕ್ಕವ ಹಿಡಕೊಂಡ
ಬಿಕ್ಕುಂತ ತಿರಗ್ಯಾರ ಮಳೆರಾಯಾ.

ಮಳೆರಾಯ ಎಲ್ಲಿದ್ದರೂ ಕರಗಿ ನೀರಾಗುವಂತೆ ಹೀಗೆ ತಮ್ಮ ದಾರುಣ ಸ್ಥಿತಿಯನ್ನು ತೋಡಿಕೊಂಡಿದ್ದಾರೆ. ಮನುಷ್ಯನಿಗೆ ಅನ್ನ ಮುಖ್ಯವಾದುದು. ಅದಿಲ್ಲದಾಗ ಪ್ರೀತಿ, ವಾತ್ಸಲ್ಯ, ಅಭಿಮಾನ ಗಳೆಲ್ಲ ಮರೆಯಾಗುತ್ತವೆ. ಮಕ್ಕಳನ್ನು ಮಾರುವ ಪರಿಸ್ಥಿತಿಯನ್ನೆ ದುರಿಸುವ ಜೀವಕ್ಕೆ ಎಷ್ಟೊಂದು ತಾಪವಾಗಿರಬಾರದು? ಇವಕ್ಕೆಲ್ಲ ಕಾರಣ ಮಳೆರಾಯ. ಆದ್ದರಿಂದಲೇ ಅವನನ್ನು ಪುನಃ ಪುನಃ ಹೆಸರಿಸಿ ಹಾಡುಕಟ್ಟಲಾಗಿದೆ. ಅವನ ಕರುಣೆಯನ್ನು ಹಾರೈಸ ಲಾಗಿದೆ. ಇದೇ ತರದ ಭಾವನೆಯ ಇನ್ನೊಂದು ಹಾಡು ಹೀಗಿದೆ.

ಯಾತಕೆ ಮಳೆ ಹೋದಾವೋ-ಶಿವಶಿವ
ಲೋಕ ತಲ್ಲಣಿಸತಾವೋ
ಬೇಕಿಲ್ಲದಿದ್ದರೆ ಬೆಂಕಿಯ ಮಳೆಸುರಿದು
ಉರಿಸಿ ಕೊಲ್ಲಲು ಬಾರದೇ.

ಬಾನಕೆ ಇಲ್ಲದೋರು–ಶಿವಶಿವ
ಬಾಗಿಲಿಗಿ ಹೋಗಿ ನಿಂತಾರ
ಬಾನಕೆ ಇದ್ದೋರ ಬಾಗಿಲಿಗೆ ಹೋದಾರ
ಹೀನ ಮಾತುಗಳಾಡ್ಯಾರು.

ಹೊಟ್ಟೆಗೆ ಇಲ್ಲದೋರು–ಶಿವಶಿವ
ಹೊಸ್ತಿಲಿಗೆ ಹೋಗಿ ನಿಂತಾರ
ಹೊಟ್ಟೀಗಿ ಇದ್ದೋರ ಹೊಸ್ತಲಿಗೆ ನಿಂತರ
ಭ್ರಷ್ಟ ಮಾತುಗಳಾಡ್ಯಾರು.

ರೊಟ್ಟಿ ಗುಗ್ಗರೀ ಬೇಡಿ–ಶಿವಶಿವ
ಬಟ್ಟೊಂದು ಕಚ್ಚುತಾವೆ
ಮಕ್ಕಳ ಗೋಳು ನೋಡಲಾರೆನೊ ಶಿವನೆ
ಮಳೆರಾಯ ಕರುಣಿಸೋ.

ಬರಗಾಲದಿಂದ ಬಂದ ದಾರಿದ್ರ್ಯ, ಅಪಮಾನಗಳನ್ನು ಸಹಿಸಲಾರದೆ ಮಕ್ಕಳು ಗುಗ್ಗರಿಗಾಗಿ ಹಂಬಲಿಸಿ ಬೆರಳನ್ನೇ ಕಚ್ಚುವ ದಾರುಣ ಚಿತ್ರವನ್ನು ನೋಡಿ ತಾಳಲಾರದೆ ಮಳೆರಾಯನಲ್ಲಿ ಅವನ ಕರುಣೆಗಾಗಿ ಬೇಡಿಕೊಳ್ಳುವ ಈ ಹಾಡಿನ ಭಾವ ಮನಸ್ಸನ್ನು ಕಲಕುತ್ತಿದೆ. ದೇವರಲ್ಲಿ ತಮ್ಮ ಇಷ್ಟಾರ್ಥಗಳನ್ನು ಬೇಡಿಕೊಳ್ಳುವುದು ಭಕ್ತಿಯ ಒಂದು ಅಂಗವೇ. ಆದರೆ ಇಲ್ಲಿಯ ಬೇಡಿಕೆ

ಮಾತ್ರ ದೇವರನ್ನು ಅಂದರೆ ಮಳೆಯ ದೇವರನ್ನು ಹಿಡಿದು ಅಲ್ಲಾಡಿಸುವಂಥದು. ಹೆಚ್ಚಿನ ಭೋಗ ಭಾಗ್ಯಗಳಿಗಾಗಿ ದೇವರಲ್ಲಿ ವಿನಂತಿಸಿಕೊಳ್ಳುವುದು ಸಾಮಾನ್ಯ. ತುತ್ತು ಅನ್ನಕ್ಕಾಗಿ ಇಷ್ಟೊಂದು ಆರ್ತರಾಗಿ ಕೇಳುವ ದನಿ ಭಕ್ತಿಯ ನೆಲೆಯನ್ನು ಮೀರಿದೆ ಎಂದು ಅನಿಸುತ್ತದೆ. ಇಂಥ ಪ್ರಾಮಾಣಿಕ ಮತ್ತು ಶಕ್ತಿಶಾಲಿಯಾದ ಭಾವಾಭಿವ್ಯಕ್ತಿ ಜಾನಪದ ಪ್ರತಿಭೆಗೆ ಮಾತ್ರ ಸಾಧ್ಯವಾಗುವಂಥದು. ಕಲ್ಪನೆ, ಬೆಡಗು, ಆಡಂಬರ, ಒಂದೂ ಇಲ್ಲದ ಜನಪದ ಭಕ್ತಿ ಗೀತೆಗಳು ಅಚ್ಚ ಭಕ್ತಿಯ ಪ್ರತೀಕಗಳಾಗಿರುವುದನ್ನು ಇಂಥ ಹಾಡು ಗಳ ಮೂಲಕ ಕಂಡುಕೊಳ್ಳಬಹುದಾಗಿದೆ.

೫. ಬೇಡಿಕೆ

ಭಕ್ತಿ ಎನ್ನುವುದು ದೇವರ ಮೇಲಿನ ಪ್ರೀತಿ ಎಂಬ ಮಾತು ನಿಜ. ಪ್ರೀತಿ ಸ್ವಾರ್ಥ ಮೂಲವಾಗಿರಬಾರದು. ಪ್ರೀತಿಗಾಗಿ ಪ್ರೀತಿ ಇರಬೇಕೆಂಬುದೂ ನಿಜ. ಅಂತೆಯೇ ಭಕ್ತಿಯ ಉದ್ದೇಶ ಕೇವಲ ಭಕ್ತಿಯಾಗಿರಬೇಕಲ್ಲದೆ ಆಶೆ-ಆಕಾಂಕ್ಷೆಗಳಿಂದ ಕೂಡಿರಬಾರದೆಂದು ಹೇಳಲಾಗುತ್ತದೆ. ದೇವರಲ್ಲಿ ಏನನ್ನಾದರೂ ಬೇಡಿದರೆ, ಕೇಳಿದರೆ, ನಮ್ಮ ಭಕ್ತಿಯನ್ನು ವ್ಯಾಪಾರಕ್ಕೆ ಇಟ್ಟಂತಾಗುತ್ತದೆ ಎಂದು ಭಾವಿಸಲಾಗುತ್ತದೆ. ನಾವು ಸ್ವಾರ್ಥದಿಂದ ಎಷ್ಟೆಷ್ಟು ದೂರ ವಿರುವೆವೋ ಅಷ್ಟು ಪ್ರಮಾಣದಲ್ಲಿ ಭಕ್ತಿ ಶುದ್ಧವಾಗಿರುತ್ತದೆ.

ದೇವರು ಪ್ರತ್ಯಕ್ಷನಾಗಿ "ಮುಕ್ತಿಯನ್ನು ನೀಡುತ್ತೇನೆ ಬಾ" ಅಂದಾಗ ಬೇಡವೆಂದು ತಿರಸ್ಕರಿಸಿದಂಥ ಭಕ್ತರ ಉದಾಹರಣೆಗಳೂ ಇವೆ. ಮುಕ್ತಿ ಅತ್ಯಂತ ಉನ್ನತವಾದ ಮಾನವ ಸಿದ್ಧಿ. ಆದರೆ ಅದನ್ನು ದೇವರಿಂದ ಪಡೆದಾಗ ಎಲ್ಲಿ ತಮ್ಮ ಭಕ್ತಿಗೆ ಬೆಲೆಕಟ್ಟಿ ಕಳಂಕಗೊಳಿಸಲಾಗುವುದೋ ಎಂಬ ಭಯ ಅಂಥ ಭಕ್ತರಿಗಿರುವುದು.

ಆಶ್ಚರ್ಯದ ಸಂಗತಿಯೇನಲ್ಲ. ದೇವರ ದರ್ಶನವೊಂದೇ ಅವರ ಸಂತೋಷಕ್ಕೆಬೇಕಾದುದು. ಭಕ್ತ ಕೊನೆಕೊನೆಗೆ ಈ ಮಟ್ಟಕ್ಕೇರ ಬೇಕು. ಇದೇ ಅತ್ಯಂತ ಶ್ರೇಷ್ಠವಾದ ಪರಿಶುದ್ಧವಾದ ಭಕ್ತಿ ಎಂದು ವಿವರಿಸಲಾಗಿದೆ.

ಆದರೆ ಜಾನಪದರ ಭಕ್ತಿಯನ್ನು ಈ ಮಾನದಂಡಗಳಿಂದ ಅಳೆಯಲಾಗದು. ಭಕ್ತಿಯ ಉದಾತ್ತ ತತ್ವಗಳ ಪರಿಚಯ, ತಿಳುವಳಿಕೆ, ಆಚರಣೆಯ ಗೊಡವೆಯೇ ಅವರಿಗಿಲ್ಲ. ಸ್ವಾರ್ಥ–ನಿಸ್ವಾರ್ಥ ಸಕಾಮ–ನಿಷ್ಕಾಮ ಮುಂತಾದ ವಿಚಾರಗಳು ಅವರಿಗೆ ಅರ್ಥವಾಗಲು ಸಾಧ್ಯವಿಲ್ಲ ಮತ್ತು ಅವರಿಗೆ ಅವೆಲ್ಲವುಗಳ ಅವಶ್ಯಕತೆಯೇ ಇಲ್ಲ. ಅವರ ಭಕ್ತಿಯು ನೇರವೂ ,ಸರಳವೂ ಆದುದರಿಂದ ದೇವರಲ್ಲಿ ಏನನ್ನಾದರೂ ಬೇಡುವುದು ಅವರ ದೃಷ್ಟಿಯಲ್ಲಿ ಅಪರಾಧವೇನಲ್ಲ. ದೇವರು ದೊಡ್ಡವನು ತಮ್ಮನ್ನೆಲ್ಲಾ ಕಾಪಾಡುವ ತಂದೆ. ನಮ್ಮ ಕಷ್ಟ ಸುಖಗಳನ್ನು ಅವನಲ್ಲಿ ತೋಡಿಕೊಂಡು, ಕಷ್ಟಗಳಲ್ಲಿ ನೆರವಾಗಲು ಕೇಳಿಕೊಳ್ಳುವುದರಲ್ಲಿ ತಪ್ಪೇನೂ ಇಲ್ಲ. ಆದರೆ ಈ ಜಾನಪದರು ತಮ್ಮ ಭಕ್ತಿಯನ್ನು ವ್ಯಾಪಾರೀ ನೆಲೆಯಲ್ಲಿ ನಿಲ್ಲಿಸಿದವರಲ್ಲ. ತಂದೆಯನ್ನೋ, ತಾಯಿಯನ್ನೋ ಅಂಗಲಾಚಿ ಬೇಡಿಕೊಂಡಂತೆ ದೇವರಲ್ಲಿ ಬೇಡಿಕೊಳ್ಳುವರು. ದೇವರು ಇವರ ಇಷ್ಟವನ್ನು ಈಡೇರಿಸದಿದ್ದರೂ ಅವನ ಮೇಲಿರುವ ಭಕ್ತಿ, ನಿಷ್ಠೆಗಳನ್ನು ಎಳ್ಳಷ್ಟೂ ಕಡಿಮೆ ಮಾಡುವವರಲ್ಲ.

ಶಿಷ್ಟವಲಯದ ಭಕ್ತರಂತೆ ದೇವರ ಸಾಕಾರ – ನಿರಾಕಾರ ಸಗುಣ–ನಿರ್ಗುಣ ಮುಂತಾದ ರೂಪ ಲಕ್ಷಣಗಳ ಬಗ್ಗೆ ಜಾನಪದರು ತಲೆ ಕೆಡಿಸಿಕೊಂಡವರಲ್ಲ. ಎದುರಿಗೆ ಕಾಣುವ ದೇವರು, ಅವನ ಆಕಾರ ಇವಿಷ್ಟೇ ಅವರಿಗೆ ಸತ್ಯ. ಅದನ್ನು ದಾಟಿ ಆಚೆಗೆ

ಹೋಗುವುದು ಅವರಿಂದಸಾಧ್ಯವಿಲ್ಲ.ಅದು ಅವರಿಗೆ ಬೇಕಾಗಿಯೂ, ಇಲ್ಲ. ತಮ್ಮ ಅನುಭವಕ್ಕೆ ಗೋಚರವಾಗದ್ದರ ಬಗ್ಗೆ, ಅವರು ಹೆಚ್ಚಿನ ಯೋಚನೆ ಮಾಡಲಾರರು. ಆದ್ದರಿಂದ ಅವರಿಗೆ ಅವ ರೂರಿನ ದೇವತೆ, ಮನೆಯ ದೇವರು, ಶರಣರು, ಯೋಗಿಗಳು ಎಲ್ಲರೂ ಸಾಕ್ಷಾತ್ ದೇವರೇ. ಅದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಅಂದ ಮೇಲೆ ದೇವರಲ್ಲಿ ಬೇಡಿಕೊಳ್ಳುವುದು, ಅವರಿಗೆ ಸಹಜ ವಾಗಿಯೇ ಇದೆ. ತಾವು ನಂಬಿದ ದೇವರಿಗೆ ಬೇಡಿದ್ದನ್ನು ಕೊಡುವ ಶಕ್ತಿಯಿರುವುದರ ಬಗ್ಗೆ ಅವರಲ್ಲಿ ಅನುಮಾನವೇ ಇಲ್ಲ. ವಿಶ್ವಾಸ ದಿಂದ–ಪ್ರೀತಿಯಿಂದ ಮಕ್ಕಳಂತೆ ಬೇಡಿಕೊಳ್ಳುತ್ತಾರೆ.

ದೇವರಿಗೆ ಹರಕೆ ಕಟ್ಟಿ ಬೇಡಿಕೊಳ್ಳುವುದು, ಹಳ್ಳಿಗಳಲ್ಲಿ ಸಾಮಾನ್ಯ. ಏನಾದರೂ ಕಷ್ಟ, ತೊಂದರೆ ಬಂದರೆ ಅದರಿಂದ ಪಾರು ಮಾಡುವ ಹೊಣೆಯನ್ನು ನಿರ್ಭಿಡೆಯಿಂದ ದೇವರಿಗೆ ಒಪ್ಪಿಸಿ ಬಿಡುತ್ತಾರೆ.

ಅದಕ್ಕೆ ಪ್ರತಿಯಾಗಿ ಕಾಣಿಕೆ ಸಲ್ಲಿಸುವುದಾಗಿ ಮನಸ್ಸಿನಲ್ಲಿಯೇ ಮಾತು ಕೊಟ್ಟಿರುತ್ತಾರೆ. ಈ ಕಾಣಿಕೆ ಕೃತಜ್ಞತೆಯ ರೂಪದಲ್ಲಿರು ವಂಥದು. ಇವರ ದೇವರುಗಳೂ ಇಂಥ ಕೊಡ-ಕೊಳ್ಳುವ ವ್ಯವ ಹಾರಕ್ಕೆ ಬಗ್ಗಿ ಹೋಗಿರುತ್ತವೆ. ಯಾವುದೇ ಕಾರಣದಿಂದ ಕಾಣಿಕೆ ಬರುವುದು ತಡವಾದರೆ ನೆನಪಿಸಿ ಕೇಳಿ ಪಡೆಯುತ್ತಾರೆ.

ಗುಡ್ಡದ ಎಲ್ಲವ್ವ ವಡ್ಯಾಣ ಬೇಡ್ಯಾಳ
ಒಡ್ಡಿನ ಹೊಲವ ಬೆಳೆಯಲಿ। ಎಲ್ಲವ್ವ
ಒಡ್ಯಾಣಕ ಮುತ್ತು ಬಿಗಸೇನ।

ಮಳೆ ಬೆಳೆ ಚೆನ್ನಾಗಿ ಬಂದು ಪರಿಸ್ಥಿತಿ ಸುಧಾರಿಸಿದರೆ ತಪ್ಪದೇ ಹರಕೆ ಸಲ್ಲಿಸುವುದಾಗಿ ಈ ಹಾಡಿನಲ್ಲಿ ಕೇಳಿಕೊಳ್ಳಲಾಗಿದೆ. ಇಲ್ಲಿ ದೇವರಿಗೆ ಮತ್ತು ಭಕ್ತರಿಗೆ ಸಂಕೋಚವಿಲ್ಲ. ಮುಜುಗರವಿಲ್ಲ. ವಿನಂತಿಸಿಕೊಂಡು ಹೆಚ್ಚಿನ ಅವಧಿ ಪಡೆದುಕೊಳ್ಳುವ ರೀತಿ ಭಕ್ತಿಯ ಆತ್ಮೀಯತೆಯನ್ನು ಸೂಚಿಸುತ್ತದೆ. ತಮ್ಮ ಇಚ್ಛೆ ಈಡೇರದಿದ್ದರೆ ನಿರಾಶರಾಗದೆ ಪುನಃ ಪುನಃ ದೇವರ ಗುಡಿಗೆ ಹೋಗಿ,

ದ್ಯಾಮವ್ವ ದುರಗವ್ವ ನಾ ನಿನ್ನ ಮಗಳವ್ವಾ
ಹಾಲು ತಂದೀನಿ ಕುಡಿಯುವ್ವಾ । ದ್ಯಾಮವ್ವ
ಮನದಾಗಿನ ಮಾತಗೆಲಸವ್ವಾ ।

ಎಂದು ನಿರ್ಮಲ ಮನಸ್ಸಿನಿಂದ ಕೇಳಿಕೊಳ್ಳುವುದಕ್ಕೆ ಬೇಸರವಿಲ್ಲ. ದೇವರ ಮೇಲೆ ಜಾನಪದರಿಗೆ ಇರುವ ಅಚಲ ವಿಶ್ವಾಸವೇ ಅವರನ್ನು ಬಾಳಿನ ಹಾದಿಯಲ್ಲಿ ಕೈಹಿಡಿದು ನಡೆಸುತ್ತದೆ. ಎಂಥದೇ ಬೇಡಿಕೆ ಇದ್ದರೂ ಅದು ದೇವರಿಂದ ಮಾತ್ರ ಕೈಗೂಡುವಂಥದು. ಅವನು ಕೊಡದಿದ್ದರೆ ಇಲ್ಲ ಎಂಬ ದೃಢನಂಬಿಕೆ ಇರುವುದರಿಂದ ಬೇಡಿಕೆಯಲ್ಲಿ ದೈನ್ಯವು ಸಹಜವಾಗಿ ಒಡಮೂಡಿರುತ್ತದೆ. ಒಬ್ಬ ಗರತಿ :

ವಿಟ್ಟಲನ ಗುಡಿಯಾಗ ಎಷ್ಟೊತ್ತ ನಿಂದರಲಿ
ಬಟ್ಟ ಕುಂಕುಮ ಬೆವತಾವ । ವಿಟ್ಟಲನೆ
ಟೊಪ್ಪಿಗಿ ಮಗನ ಕರುಣಿಸೋ ।

ಎಂದು ವಿಠ್ಠಲನಲ್ಲಿ ಕೇಳಿಕೊಳ್ಳುತ್ತಾಳೆ. ದೇವರ ಕರುಣೆಯಿಂದ ಮಾತ್ರ ಮಕ್ಕಳ ಭಾಗ್ಯ ಲಭ್ಯ. ಅದಕ್ಕಾಗಿ ವರ ಪಡೆಯಲು ಆ ಗರತಿ

ಎಷ್ಟೊಂದು ಸಹನೆಯಿಂದ ಕಾದುಕೊಂಡಿದ್ದಾಳೆಂದರೆ ನಿಂತು ನಿಂತು ಸೆಕೆಗೆ ಬಟ್ಟ ಕುಂಕುಮ ಕರಗುತ್ತದೆ. ಕುಂಕುಮ ಕರಗಿ ನೀರಾಗುತ್ತಿದ್ದರೂ ವಿಠ್ಠಲನ ಮನಸ್ಸು ಇನ್ನೂ ಕರಗಿದಂತಿಲ್ಲ. ತನ್ನನ್ನು ಎಷ್ಟೊಂದು ಪರೀಕ್ಷಿಸುವುದು? ತಿಳುವಳಿಕೆ ಹೇಳುವ ರೀತಿಯಲ್ಲಿ ವರಬೇಡುವ ಈ ರೀತಿ ಅನ್ಯೋನ್ಯ ಭಕ್ತಿಯ ಸಂಕೇತವಾಗಿದೆ. ಜಾನಪದರು ಅಲ್ಪ ಸಂತೃಪ್ತರು. ಅತಿಯಾಸೆ ಎಂದೂ ಅವರನ್ನು ಕಾಡಿಲ್ಲ. ಹೆಚ್ಚಿನ ಭೋಗ ಭಾಗ್ಯಗಳನ್ನು ಬೇಡುವ ಲೋಭಿಗಳು ಅವರಲ್ಲ. ನೆಮ್ಮದಿಯ ಜೀವನಕ್ಕೆ ಎಷ್ಟು ಬೇಕೋ ಅಷ್ಟು ಸಾಕು. ರೈತನ ದೃಷ್ಟಿಯಲ್ಲಿ ಸಂತೃಪ್ತಿಯಿಂದ ಆದರ್ಶ ಬದುಕನ್ನು ಬಾಳಲು ಏನೇನು ಬೇಕೆಂಬುದನ್ನು ಈ ರೀತಿ ತಿಳಿಸಲಾಗಿದೆ.

ನಾವು ತಿಮ್ಮಯ್ಯನ ಏನ ಬೇಡೋರಲ್ಲ
ಹೂಡೋವೆರಡೆತ್ತ ಕರಿಯೆಮ್ಮಿ। ಮುತ್ತಿನ ಚೆಂಡು
ಆಡುಂಬೋನೊಬ್ಬ ಮಗ ಸಾಕು।

ಜಾನಪದರ ಮನಸ್ಸು ಜೀವನಗಳೆರಡೂ ತುಂಬಾ ಸರಳವಾಗಿರುವಂಥವು. ಈ ಮೇಲಿನ ತ್ರಿಪದಿ ಆ ಸರಳ ಜೀವನ ಚಿತ್ರವನ್ನು ಬಿಡಿಸಿ ತೋರಿಸುತ್ತದೆ. ರೈತನ ಬೇಡಿಕೆಯ ಸ್ವರೂಪ ಎಂಥವೆಂದು ತಿಳಿದುಕೊಳ್ಳಲಾಯಿತು. ಇನ್ನು ಗರತಿಯ ಬೇಡಿಕೆ ಇನ್ನಷ್ಟು ಸರಳ ಮತ್ತು ಹೃದ್ಯವಾಗಿರುವಂಥದು. ಭಾರತೀಯ ಸ್ತ್ರೀ ತನ್ನ ಜೀವನದಲ್ಲಿ ಅತ್ಯಂತ ಹೆಚ್ಚಿನ ಬೆಲೆ ಕೊಡುವ ವಸ್ತುವೆಂದರೆ ಅವಳ ಮುತ್ತೈದೆತನ. ಅದರ ಮುಂದೆ ಎಲ್ಲ ಅಷ್ಟೈಶ್ವರ್ಯಗಳೂ ಕಡಿಮೆಯೇ. ಅವಳು ದೇವರಲ್ಲಿ ಅದೊಂದನ್ನೇ ತುಂಬ ಹೃದಯದಿಂದ ಕೇಳಿಕೊಳ್ಳುತ್ತಾಳೆ.

ಕಟ್ಟಿದ ಕರಿಮಣಿ ಕರಿಯ ಕಾಜಿನ ಬಳೆ
ಸ್ಥಿರವಾಗಿ ಇರುವಂತ ವರವ ಕೊಡೇ ತಾಯಿ॥
ಒಳ್ಳೆಯ ಮಾಂಗಲ್ಯ ಸಣ್ಣ ಗಾಜಿನ ಬಳಿ
ಸ್ಥಿರವಾಗಿ ಇರುವಂತ ವರವ ಕೊಡೇ ತಾಯಿ॥
ಅರಿಸಿಣ ಕುಂಕುಮ ಅರಳು ಮಲ್ಲಿಗೆ ದವನ
ಸ್ಥಿರವಾಗಿ ಇರುವಂತ ವರವ ಕೊಡೇ ತಾಯಿ॥

ಮುತ್ತೈದೆಯಾಗಿ ಗೌರವದಿಂದ ಬಾಳಬೇಕೆಂಬುದೊಂದೇ ಅವಳ ಮನದ ಹಿರಿಯಾಸೆ. ತುಂಬು ಬಾಳನ್ನು ಬಾಳಿದ ಮೇಲೆ ಸಹಜವಾದ ವೈರಾಗ್ಯ ಮೂಡುವುದು. ಗರತಿಯ ಸಾತ್ವಿಕ ಜೀವನಕ್ಕೆ ಮರಣದ ಭಯವಿಲ್ಲ. ಇನ್ನುಳಿದ ವರ ಬೇಡಿಕೊಳ್ಳುವಂತೆ ಮರಣವನ್ನೂ ಕೇಳಿ ಪಡೆಯುವ ಗರತಿಯ ವ್ಯಕ್ತಿತ್ವದ ಭವ್ಯತೆ ಅವರ್ಣನೀಯವಾದದು.

ಅಂಗೈಯಾಗಿರುವ ಲಿಂಗಮೂರುತಿ ಸ್ವಾಮಿ
ಮಂಗಳಾರತಿ ನಾ ಬೆಳಗಿ । ಕೇಳೇನ
ಮಾರಾಯರ ಮುಂದ ಮರಣವ।

ಹೆಣ್ಣಿಗೆ ಮುತ್ತೈದೆ ಸಾವು ಎಷ್ಟೊಂದು ಮಹತ್ವದೆಂಬುದು ಇಲ್ಲಿ ವ್ಯಕ್ತವಾಗಿದೆ. ತನ್ನ ಮಹಾರಾಯನ ಮುಂದೆಯೇ ತಾನು ಮರಣವನ್ನು ಪಡೆಯಬೇಕೆಂಬ ಹಿರಿಯ ಹಂಬಲ ಪರಿಪೂರ್ಣದ ವ್ಯಕ್ತಿತ್ವದ ಸಹಜ ಇಚ್ಛೆಯಾಗಿದೆ, ಇಂಥ ಮರಣವನ್ನು ಹಾರೈಸುವ ಈ ಜೀವ ಯಾವ ಶರಣ ಸನ್ಯಾಸಿಗೂ ಕಡಿಮೆಯಾದುದ್ದಲ್ಲ. ನಮ್ಮ ಗ್ರಾಮೀಣ ಸಂಸ್ಕೃತಿಯ ಒಂದು ಮುಖದ ಪರಿಚಯ ಇಲ್ಲಿ ಉಂಟಾಗುತ್ತದೆ. ಯಾವ ವೈಚಾರಿಕ ಹಿನ್ನೆಲೆ ಇಲ್ಲದೆ

ಪರಿಪೂರ್ಣ ಬದುಕನ್ನು ಬಾಳುವ ಜಾನಪದರ ಶ್ರೀಮಂತ ಸಂಸ್ಕೃತಿ ಶಿಷ್ಟ ಜನಾಂಗಕ್ಕೆ ಯಾವ ವಿಧದಲ್ಲಿಯೂ ಕಡಿಮೆಯದಲ್ಲ.

೬. ನಿರೀಕ್ಷೆ

ಜಾನಪದ ಭಕ್ತಿ ವಿವಿಧ ರೂಪದಲ್ಲಿ ವ್ಯಕ್ತವಾಗಿದೆ. ದೇವರಿಗೆ ಸಂಬಂಧಿಸಿದ ಎಲ್ಲಾ ಆಚರಣೆ ಕ್ರಿಯೆಗಳೂ ಭಕ್ತಿ ರಸದಲ್ಲಿ ತೊಯ್ದಿವೆ. ದೇವರ ಬಗ್ಗೆ ಇಲ್ಲಿ ಭೀತಿಯಿಲ್ಲ. ಪ್ರೀತಿಯಿದೆ. ಪ್ರೀತಿಯು ಕಣ್ಣಿದರು ಏನೆಲ್ಲ ನಡೆಯಬಹುದು. ವ್ಯಾವಹಾರಿಕ ತರ್ಕದಿಂದ ಅದನ್ನು ಅಳೆಯಲಾಗದು. ದೇವರನ್ನು ಅಶರೀರ ವಸ್ತುವೆಂದು ಜಾನಪದರು ಭಾವಿಸಿಲ್ಲ. ಅವನೂ ನಮ್ಮಂತೆಯೇ ಕರೆದರೆ ಮನೆತನಕ ಬರುತ್ತಾನೆ. ಬಂದೇ ಬರುತ್ತಾನೆ. ಅವನ ಬರುವಿಕೆಯನ್ನು ಕಾತರದಿಂದ ಕಾಯುವ ಮುಗ್ಧ ಮನಸ್ಸಿನ ಮಿಡಿತ ಹೃದಯ ಸ್ಪರ್ಶಿಯಾಗಿದೆ.

ಹರನು ಬರತಾನಂತ ಹಾದೀಯ ಉಡಿಗೇನ
ಹವಳ ಮಲ್ಲೀಗೆ ಹರವೇನ। ನಾಗಯ್ಯಸ್ವಾಮಿ
ಹರನೆ ನನ ಮನೆಗೆ ದಯಮಾಡೊ ।

ಹರನ ಬರುವಿಗಾಗಿ ಮಾಡಿರುವ ತಯಾರಿ ಭಾವ ಪೂರ್ಣ ವಾಗಿದೆ. ಸರಳತೆಯಲ್ಲಿಯೇ ಭಕ್ತಿಯ ಭವ್ಯತೆ ಒಡಮೂಡಿದೆ. ಹರನ ಬಗೆಗಿರುವ ಗೌರವ ಅಂತಃಕರಣಗಳು ಮನಸ್ಸನ್ನು ಕಲಕು ವಂತಿವೆ.

ಸಂಪನ್ನ ಬರತಾನೆಂದು ಮಂಚ ಕೊಡವಾಸೀದೆ
ಸಂಪಿಗಿ ಹೂವ ಹರವೀದೆ। ತಿಮ್ಮಯ್ಯ ನೀ
ಸಂಪನ್ನ ನಮ್ಮನಿಗೆ ದಯಮಾಡೊ।

ತಿಮ್ಮಯ್ಯನ ಬಗ್ಗೆ ಎಷ್ಟೇ ಗೌರವವಿದ್ದರೂ ಅವನು ತಮ್ಮವನೇ ಎಂಬ ವಿಶ್ವಾಸವಿದೆ. ಅವನಿಗಾಗಿ ವಿಶೇಷ ತಯಾರಿ ಏನಿಲ್ಲ. ಅವಸರದಲ್ಲಿ ಮಂಚ ಜಾಡಿಸಿ ಹಾಸಲಾಗಿದೆ. ಮೇಲೆ ಸಂಪಿಗೆಯ ಹೂವ ಹರವಿದೆ ಅಷ್ಟೇ. ಇದು ದೇವರೊಂದಿಗಿರುವ ಆತ್ಮೀಯತೆಯ ಪ್ರಗಾಢತೆಯನ್ನು ತಿಳಿಸುತ್ತದೆ. ಕೃಷ್ಣನ ದಾರಿ ಕಾದು ಅವನು ಬರದಿದ್ದಾಗ.

ಕೃಷ್ಣ ಕೃಷ್ಣ ಎಂದು ಮತ್ತೆ ಬೀದಿಗೆ ಬಂದೆ
ಕೃಷ್ಣ ನಮಗೆಲ್ಲಿ ದೊರೆತಾನ। ಈ ಪರಿ
ಎಷ್ಟು ದಿನ ಹಿಂಗ ಕಳೆಯಲಿ |

ಎಂದು ಮನದ ಹಂಬಲ ತೋಡಿಕೊಳ್ಳಲಾಗಿದೆ. ಅವನ ದರ್ಶನದ ಬಯಕೆ ತೀವ್ರವಾಗಿ ಕಾಡುತ್ತಿದೆ. ಈ ವಿರಹದಲ್ಲಿ ಎಷ್ಟು ದಿನ ಕಳೆಯಬೇಕಾಗುವುದೋ ಎಂಬ ಚಿಂತೆ ಬೇರೆ ಇದೆ.

ಕೃಷ್ಣ ಬಂದರೆ ಗೊತ್ತಾಗದೆ ಇರುತ್ತದೆಯೇ?
ಇಂದು ನನ್ನಂಗಳ ಶ್ರೀಗಂಧ ನಾತಾವ
ಬಂದಿದಾನೇನ ಶ್ರೀ ಹರಿ| ನನಮನಿಗೆ
ಗಂಧದ ಮಡು ಕಲಕೂತ

ಗಂಧದ ಮಡುವನ್ನು ಕಲಕುತ್ತ ಬರುವ ಶ್ರೀ ಕೃಷ್ಣನ ಚಿತ್ರ ಹೃದಯಂಗಮವಾಗಿದೆ. ಈ ಕಲ್ಪನಾ ಶಕ್ತಿ ಅಗಾಧವಾದುದು. ಭಕ್ತಿಯ ತೀವ್ರತೆ ಕಾವ್ಯದ ರೂಪ ಪಡೆದಿದೆ. ಹೀಗೆ ದೇವರನ್ನು ನಿರೀಕ್ಷಿಸುವ ಅವನ ದರ್ಶನಕ್ಕಾಗಿ ಹಂಬಲಿಸುವ ಬಿಡಿಭಕ್ತಿ ಗೀತೆಗಳು ಅಸಂಖ್ಯಾತವಾಗಿವೆ. ಕೃತಕತೆಯ ಸೋಂಕು ಇಲ್ಲದ ಈ ಹಾಡುಗಳು ಅಚ್ಚ ಜಾನಪದ ಮನಸ್ಸಿನ ಪ್ರತಿಬಿಂಬಗಳಾಗಿವೆ.

೭. ಆತ್ಮೀಯ ಸಲಿಗೆ

ಈ ಮೊದಲೇ ವಿವರಿಸಿದಂತೆ ಜಾನಪದರು ದೇವರನ್ನು ಆತ್ಮೀಯ ಬಂಧುವಿನಂತೆ ಕಂಡಿದ್ದಾರೆ. ಈ ಆತ್ಮೀಯತೆ ಅತಿಯಾಗಿ ಬೆಳೆದು ಸಲಿಗೆಯಾಗಿದೆ. ಅವನ ಬಗ್ಗೆ ಎಷ್ಟೇ ಗೌರವವಿದ್ದರೂ ಅವನನ್ನು ತಮ್ಮವರಲ್ಲಿ ಒಬ್ಬನನ್ನಾಗಿಯೇ ಅವನನ್ನು ಕಾಣು ತ್ತಾರೆ. ಇದೇ ಜಾನಪದ ಭಕ್ತಿಯ ಒಂದು ಮಹತ್ವದ ವೈಶಿಷ್ಟ್ಯ. ಈ ಆತ್ಮೀಯ ಸಲುಗೆ ಎಂದೂ ಮಿತಿಮೀರಿ ಉಪೇಕ್ಷೆಯಾಗಿಲ್ಲ, ಸಲುಗೆಯ ಹಿಂದೆ ನಿಷ್ಕಲ್ಮಷವಾದ ಪ್ರೀತಿಯ ಸೆಲೆ ಇದೆ ; ಅಪಾರ ಭಕ್ತಿ ಭಾವನೆಯ ಹೊನಲಿದೆ. ಭೀತಿಗಾಂಭೀರ್ಯಗಳನ್ನು ಮೀರಿನಿಂತು, ಇಂಥ ಸಲಿಗೆಯೊಂದಿಗೆ ದೇವರಲ್ಲಿ ವ್ಯವಹರಿಸಬೇಕಾದರೆ ಜಾನ ಪದರ ಮನಸ್ಸು ಎಷ್ಟೊಂದು ಪ್ರೇಮಮಯಿ, ಮುಗ್ಧ, ಭಾವುಕ ವಾಗಿತ್ತು ಎಂಬುದು ಗೊತ್ತಾಗುತ್ತದೆ. ದೇವರ ಸಮೀಪಕ್ಕೆ ಈ ಭಾವುಕರು ಕ್ರಮಿಸಿದಷ್ಟು ಇತರರಿಗೆ ಕ್ರಮಿಸಲು ಸಾಧ್ಯವಾಗ ಲಾರದು.

ಕೂಡಲ ಸಂಗಮನನ್ನು ಕಂಡು
ಕೂಡಲ ಸಂಗಯ್ಯ ಹೊಳಿಯಾಗ ಹ್ಯಾಂಗಿದ್ದಿ
ಹಳ್ಳೊತ್ತಿ, ಸಣ್ಣ ಮಳಲೊತ್ತಿ, ಗಂಗೀಯ
ನೀರೊತ್ತಿ ಲಿಂಗ ನೆನದಾನ |

ಹೀಗೆ ಆತ್ಮೀಯ ಬಂಧುವೊಬ್ಬನ ಕಷ್ಟ ಸುಖ ವಿಚಾರಿಸಿ ಕೊಂಡಂತೆ ಕೇಳಲಾಗಿರುವ ಮಾತಿನ ಹಿಂದೆ ಅಂತಃಕರುಣವಿದೆ. ಸಂಗಯ್ಯನ ಬಗ್ಗೆ ಮರುಕವಿದೆ. ದೇವನ ಸಹನೆ ಕಂಡು ಆಶ್ಚರ್ಯ ವಾಗಿ ಅವನನ್ನೇ ಪ್ರಶ್ನಿಸಿರುವ ಕ್ರಮ ಸಲುಗೆಯ ದ್ಯೋತಕವಾಗಿದೆ.

ಚಕ್ಕಡಿ ಹೂಡಿಕೊಂಡು ಎಲ್ಲವ್ವನಗುಡ್ಡಕ್ಕೆ ಹೊರಟಿದ್ದಾರೆ. ದಾರಿ ನಡೆದು ನಡೆದು ಎತ್ತುಗಳು ಬೇಸತ್ತಿವೆ. ಆಗ:

ಎಲ್ಲವ್ವ ನಿನ ಗುಡ್ಡ ಹನ್ನೆರ್ಡು ಹರದಾರಿ
ನಮ್ಮೆತ್ತಿನ ಕಾಲ ಚಳತಾವ | ಜೋಗಳ ಬಾಂವಿ
ಸತ್ತೆವ್ವ ಬಾರ ಸನಿಯಃಕ |

ಎಂದು ಗರತಿ ಹಾಡಿದ್ದಾಳೆ. ಅವಳ ಮನಸ್ಸು ಎಷ್ಟು ಮುಗ್ಧವಾಗಿದೆ ಯೆಂಬುದು ಇಲ್ಲಿ ಗೊತ್ತಾಗುತ್ತದೆ. ಇರುವಷ್ಟು ದಾರಿ ನಡೆಯಲೇಬೇಕಲ್ಲವೇ ? ಆದರೆ ಅಷ್ಟರಲ್ಲಿ ತನ್ನ ಪ್ರೀತಿಯ ಎತ್ತುಗಳ ದಣಿವು ಅವಳ ಮನಸ್ಸನ್ನು ಕರಗಿಸಿದೆ. ಆದ್ದರಿಂದ ಹನ್ನೆರಡು ಹರದಾರಿ ದೂರದಲ್ಲಿ ವಾಸವಾಗಿರುವ, ಇಷ್ಟೊಂದು ತೊಂದರೆ ಕೊಡುತ್ತಿರುವ ಎಲ್ಲವ್ವನನ್ನೇ ಆಕ್ಷೇಪಿಸುತ್ತಾಳೆ. ದಣಿವು ನೀಗಿಸಲು ಜೋಗುಳ ಬಾಂವಿ ಸತ್ಯವ್ವನನ್ನು ಆದಷ್ಟು ಸಮೀಪ ಬರಲು ವಿನಂತಿಸಿಕೊಳ್ಳುವ ರೀತಿ ಸಣ್ಣ ಮಕ್ಕಳ ಬೇಡಿಕೆಯನ್ನು ನೆನಪಿಸುತ್ತದೆ. ಸಾಮಾನ್ಯವಾಗಿ ದೇವರಿದ್ದಲ್ಲಿಗೆ ನೈವೇದ್ಯ ಒಯ್ದು ಅರ್ಪಿಸುವುದು ಕ್ರಮ. ಗರತಿಯೊಬ್ಬಳಿಗೆ ಹಾಗೆ ಒಯ್ದು ಮುಟ್ಟಿಸಲು ಬಿಡುವಿಲ್ಲ. ಆದ್ದರಿಂದ

ಮಂಗಳವಾರ ದಿವಸ ಮಂದುಳ್ಳ ಮಜ್ಜೀಗಿ
ಬಂದುಂಡ ಹೋಗ ಗಾಮದವ್ವ | ನನ ಮನಿಯ
ಹಿಂಡೆಮ್ಮ್ಯಾಗ ಬಂದ ಸುಳದ್ಹೋಗ |.

ಎಂದು ಗಾಮದವ್ವನನ್ನು ಮನೆಗೇ ಕರೆಯುತ್ತಾಳೆ. ಒಳ್ಳೆಯ ಮಜ್ಜಿಗೆ ಕೂಡ ದೇವರಿಗೆ ಅರ್ಪಿತವಾಗಬೇಕೆಂಬುದು ಅವಳ

ಬಯಕೆ. 'ಬಂದುಂಡ ಹೋಗ' ಎಂದು ನಯವಾಗಿ ಹೇಳುವ ಮಾತಿನ ಹಿಂದೆ ಇರುವ ಸಲುಗೆ ಭಾವಾತೀತವಾದುದು. ಬಂದು ಊಟ ಮಾಡಿ ಹಾಗೇ ಹೋಗದೆ ಎಮ್ಮೆಗಳನ್ನು ಆಶೀರ್ವದಿಸಿ ಹೋಗು ಎಂದು ಕೂಡ ಭಿಡೆಯಿಲ್ಲದೆ ಕೇಳಿಕೊಳ್ಳುತ್ತಾಳೆ. ಊರಲ್ಲಿ ದ್ಯಾಮವ್ವನ ಜಾತ್ರೆ ಮನೆ ತುಂಬ ನೆಂಟರು, ಎಷ್ಟು ಮಾಡಿದರೂ ಮನೆಯ ಕೆಲಸ ಮುಗಿಯುವುದಿಲ್ಲ. ದ್ಯಾಮವ್ವನ ತೇರು ಎಳೆಯು ವುದನ್ನು ಕೂಡ ನೋಡಲು ಆ ತಾಯಿಗೆ ಪುರಸೊತ್ತಿಲ್ಲ.

ತಾಯಿ ದ್ಯಾಮವ್ವನ ತೇರೆಳೆದು ಬರುವಾಗ
ತೀರಲಿಲ್ಲ ನನ್ನ ಮನಿ ದಗದ । ನಾನಿನಗ
ದೂರಿಂದ ಕೈಯ್ಯ ಮುಗದೇನ.

ಎಂದು ಹೇಳಿ ತನ್ನ ಭಕ್ತಿಯ ಸೇವೆಯನ್ನು ತೀರಿಸುತ್ತಾಳೆ. ಈ ಮುಗ್ಧರು ದೇವರಿದ್ದಲ್ಲಿಗೆ ತಾವು ಹೋಗುವ ಬದಲು ದೇವ ರನ್ನು ತಾವಿದ್ದಲ್ಲಿಗೇ ಆಹ್ವಾನಿಸಿ ಸೇವೆ ಸಲ್ಲಿಸುವಂಥವರು. ಹೇಗೆ ಸೇವೆ ಸಲ್ಲಿಸಿದರೂ ದೇವರು ಪಡೆಯುವನೆಂದು ನಂಬಿಕೆ ಅವರದು. ಇದಕ್ಕೆ ಕಾರಣ ಅವನೊಂದಿಗಿರುವ ಆತ್ಮೀಯ ಸಲುಗೆಯಲ್ಲದೆ ಬೇರೇನೂ ಅಲ್ಲ. ಗರತಿಗೆ ಮನೆಯ ಕೆಲಸದ ಚಿಂತೆ ಅಳುವ ಕಂದ ನಿಂದ ತೊಂದರೆಯಾಗುತ್ತದೆ. ಆಗ ಅವನನ್ನು ಸಮಾಧಾನ ಪಡಿಸುವ ರೀತಿ.

ಅಳಬ್ಯಾಡ ಕಂದವ್ವ ಬೇಡಿದ್ದ ಕೊಡವೇನ
ಬೆಂಡು ಬೆತ್ತಾಸ ಉಳಕಾವ । ಹಿಡಕೊಂಡ
ಆಡಿ ಬಾ ಶಿವನ ಜಡಿಯಾಗ ।.

ಶಿವನ ಜಡಿಯಲ್ಲಿ ಮಗನನ್ನು ಆಡಲು ಕಳಿಸುವ ಗರತಿಯ ದೃಷ್ಟಿಯಲ್ಲಿ ಶಿವನೆ ಮಹಿಮಾಶಾಲಿ ಭವ್ಯ ಮೂರ್ತಿಯಲ್ಲ. ತನ್ನ ಬಗ್ಗೆ ತನ್ನ ಮಗನ ಬಗ್ಗೆ ಪ್ರೀತಿ ಅನುಕಂಪಗಳನ್ನೊಳಗೊಂಡ ಮನೆಯ ಹಿರಿಯ ಜೀವ ಅವನು. ಅವನಿಗೆ ಕೆಲಸವೂ ಕಡಿಮೆ. ಅಳುವ ಮಕ್ಕಳನ್ನು ಆಡಿಸಲಾರದೆ ಮತ್ತೇನು ಮಾಡುತ್ತಾನೆ? ಆದರಿಂದ ಗರತಿ ತನ್ನ ಅಳುವ ಕಂದನನ್ನು ನೇರವಾಗಿ ಯಾವ ಸಂಕೋಚವೂ ಇಲ್ಲದೆ ಶಿವನಲ್ಲಿಗೆ ಕಳಿಸುತ್ತಾಳೆ.

ಸಾಲಿಗೆ ಹೋಗುವ ಮಗನ ಚಿಂತೆ. ಒಮ್ಮೆ ತಾಯಿಯನ್ನು ಕಾಡುತ್ತದೆ. ಮಗ ಸ್ವಲ್ಪ ದಡ್ಡನೇನೊ! ಅವನನ್ನು ಸಮಾಧಾನ ದಿಂದ ತಿದ್ದುವವರಾರು ?

ಸಾಲೀಯ ಸರಸೋತಿ ಪಾಲೀಸ ನನಮಾತ
ಸಾಲ್ಯಾಗ ಅರವಾಳಿ ನನಬಾಳಾ । ಅವನೀಗಿ
ಒರಕೊಡ ಬಾರ್ಯಾದಕಸರ ।

ಹೀಗೆ ವಿದ್ಯಾರ್ಥಿ ದೇವತೆಯಾದ ಸರಸ್ವತಿಯಲ್ಲಿ ವಿನಂತಿಸಿ ಕೊಳ್ಳುತ್ತಾಳೆ. ಶಿಷ್ಟರ ದೃಷ್ಟಿಯಲ್ಲಿ ಸರಸ್ವತಿ ವಿದ್ಯೆಯ ಸಂಕೇತ ಮಾತ್ರ. ಆದರೆ ಗರತಿಯ ದೃಷ್ಟಿಯಲ್ಲಿ ಅವಳು ಸಾಲಿಯಲ್ಲಿರುವ ಜೀವಂತ ವ್ಯಕ್ತಿ.-ತನ್ನ ಮಗನ ಜವಾಬ್ದಾರಿಯನ್ನು ಅವಳಿಗೆ ಒಪ್ಪಿ ಸುವುದರಲ್ಲಿ ಗರತಿಗೆ ಮುಜಗರವಿಲ್ಲ. ಆತ್ಮೀಯ ಸಲಿಗೆ ಇದೆ.

ತನ್ನ ಮನಸ್ಸಿನಲ್ಲಿರುವ ಯಾವುದೋ ವಿಚಾರವನ್ನು ಸ್ವಾಮಿ ಗಳಿಗೆ ತಿಳಿಸಿ ಅವರ ಸಲಹೆ ಆಶೀರ್ವಾದ ಪಡೆಯಬೇಕಾಗಿದೆ. ವಾಕ್ ಸಿದ್ಧಿಹೊಂದಿರುವ ಆ ಮಹಾಸ್ವಾಮಿಗಳಲ್ಲಿಗೆ ಬಹಳಷ್ಟು ಭಯ ಭಕ್ತಿಯಿಂದ ಹೋಗಬೇಕಲ್ಲವೇ ? ಆದರೆ ಹೋಗಲು ಬಿಡುವಿಲ್ಲ. ಮತ್ತಾರೋ ಹೊರಟಿದ್ದಾರೆ. ಅವರಿಗೆ

ಬಬಲಾದಿ ಮುತ್ಯಾಗ ಬರತೀನಂತ್ಹೇಳ
ಇರತಾರಿಲ್ಲ ಕೇಳ ಮಠದಾಗ। ಸದಾಶಿವಸ್ವಾಮಿ
ಕೊಡತಾರಿಲ್ಲ ಕೇಳ ವಾಕೇವ।

ಎಂದು ಹೇಳಿ ಕಳಿಸುತ್ತಾಳೆ. ಯಾರೋ ಬೀಗರಿಗೆ ಸುದ್ದಿ ಹೇಳಿ ಕಳಿಸುವರಂತೆ ಸ್ವಾಮಿಗಳು ಎಂಥಾ ಮಹಿಮಾಶಾಲಿಗಳೇ ಆಗಿರಲಿ ಅವರು ತನ್ನ ಮೇಲೆ ಮಮತೆಯುಳ್ಳವರೆಂಬ ನಂಬಿಗೆ ಅವಳಿಗಿರುವದರಿಂದ ಇಂಥ ಸ್ವಾತಂತ್ರ್ಯ ವಹಿಸಿದ್ದಾಳೆ.

ತಿಮ್ಮಯ್ಯ ಕುದುರೆಯೇರಿ ಮನೆಯ ಮುಂದೆ ಹಾದು ಹೊರಟಿದ್ದಾನೆ. ಯಾವುದೋ ಹರಕೆಯನ್ನು ತೀರಿಸಿಲ್ಲವೆಂದು ಅವನಿಗೆ ಈ ಮನೆಯವರ ಮೇಲೆ ಸ್ವಲ್ಪ ಅಸಮಾಧಾನ. ನಿಲ್ಲದೆ ಮುಂದೆ ಸಾಗಿದ್ದಾನೆ. ಆಗ:

ಯಾಕೊ ತಿಮ್ಮಯ್ಯ ಕೋಪ ನಮ್ಮ ಮ್ಯಾಲೆ
ಬೇಕೆಂದರೆ ಬೆಳ್ಳಿ ಚವಲಾವ। ಮಾಡಿಸಿಕೊಡುವೆ
ಕೋಪ ಬ್ಯಾಡ ಕುದುರೆ ಇಳಿಯಯ್ಯಾ।

ಎಂದು ಸಲುಗೆಯಿಂದ ಕೇಳಿಕೊಳ್ಳಲಾಗುತ್ತದೆ. ದೇವರ ಗುಡಿಗೆ ಹೋದಾಗ ದೇವರನ್ನು ಕಣ್ತುಂಬ ನೋಡಿ ಅವನೊಂದಿಗೆ ಅಂತರಂಗದ ಮಾತುಗಳನ್ನಾಡಬೇಕೆಂಬುದು ಜಾನಪದ ಭಕ್ತ ಹೃದಯದ ಹಂಬಲ. ಆದರೆ ಪೂಜಾರಿ ಗರ್ಭಗುಡಿಗೆ ಬಿಡಲಾರನು. ಆಗ:

ದೇವರಿಗಿ ಹೊಂಟೇವಿ ದಾರಿ ಬಿಡ ಪೂಜಾರಿ
ದೇವರಿಗಿ ನಮಗ ಇಸವಾಸ। ಸೊಗಲದ
ಸೋಮಲಿಂಗಗ ನಮಗ ಒಳಮಾತ।

ಗರತಿ ಈ ರೀತಿ ಪೂಜಾರಿಯನ್ನು ಕೇಳಿಕೊಳ್ಳುತ್ತಾಳೆ. ದೇವರೊಂದಿಗೆ ಒಳಮಾತುಗಳನ್ನಾಡುವಂಥ ಈ ಭಕ್ತ ಹೃದಯದ ವೈಶಾಲ್ಯ ಅಗಾಧವಾದುದು. ದೇವರೊಂದಿಗೆ ಆತ್ಮೀಯ ಸಂಭಾಷಣೆಗೆ ತೊಡಗಬೇಕೆನ್ನುವ ಅವರ ಮುಗ್ಧ ಹಂಬಲ ಭಾವ ಪೂರ್ಣವಾದುದು.

೮. ನಿಷ್ಠೆ

ದೇವರೊಂದಿಗೆ ಎಷ್ಟೇ ಸಲಿಗೆಯಿಂದಿದ್ದರೂ ಜನಪದರು ಶ್ರದ್ಧೆ-ನಿಷ್ಠೆಗಳಿಗೆ ಲಘುತ್ವ ತಂದುಕೊಂಡಿಲ್ಲ. ಕಷ್ಟಸುಖ ಏನೇ ಬಂದರೂ ಅವರ ಭಕ್ತಿ ಅಚಲವಾಗಿರುತ್ತದೆ. ಸುಖ ಬಂದಾಗ ಹಿಗ್ಗಿ, ದುಃಖ ಬಂದಾಗ ದೇವರನ್ನು ಮರೆಯುವುದು ಅವರ ಸ್ವಭಾವವಲ್ಲ. ಅವರು ತಮ್ಮ ಪಾಲಿನ ಅಳಿಲ ಸೇವೆಯನ್ನು ಯಾವ ಕೊರತೆಯನ್ನೂ ಉಂಟು ಮಾಡದೆ ನಿಷ್ಠೆಯಿಂದ ಸಲ್ಲಿಸುತ್ತ ಬಂದಿರುವರು.

ಹೊತ್ತ ಮುಳಗಿದರೇನು ಕತ್ತಲಾದರು ಏನು
ಅಪ್ಪ ನಿನ ಗುಡಿಗೆ ಬರುವೇನೋ। ಮಲ್ಲಯ್ಯ
ಮುತ್ತೀನ ಬಾಗೀಲ ತಗದೀರೋ ?

ಹೆಣ್ಣು ಮಗಳೊಬ್ಬಳು ಅಪ್ಪ ಮಲ್ಲಯ್ಯನಲ್ಲಿ ಬೇಡಿ ಕೊಳ್ಳುವ ಈ ಹಾಡು ಆಕೆಯ ಅಚಲ ನಿಷ್ಠೆಗೆ, ಅಪಾರ ಭಕ್ತಿಗೆ ಸಾಕ್ಷಿಯಾಗಿದೆ. ಹೊತ್ತು ಮುಳಗಿ ಕತ್ತಲಾದರೂ ಹೆದರಿಕೆಯಿಲ್ಲದೆ ಏಕಾಕಿಯಾಗಿ ಮಲ್ಲಯ್ಯನ ಗುಡಿಗೆ ಹೋಗುವ ಅವಳಲ್ಲಿ ಭಕ್ತಿ ನಿಷ್ಠೆಗಳು ಎಷ್ಟೊಂದು ಗಾಢವಾಗಿವೆಯೆಂಬುದನ್ನಿಲ್ಲಿ ಅರಿತುಕೊಳ್ಳ

ಬಹುದಾಗಿದೆ. ಬೆಳಗಿನ ಹೊತ್ತು ದೇವರ ಪೂಜೆಗಾಗಿ ಕಳಿಸುವ ಸಾಮಗ್ರಿ ಹೀಗಿವೆ:

ಕದರ ಮಲ್ಲಿಗಿ ಕೋಡ ಬಿದರ ಬುಟ್ಟೀಲಿ ತುಂಬಿ
ಏಳೂರ ಮುದಲ ಕಳುವೇನ। ಕಲ್ಲಪ್ಪಗ
ಈಬತ್ತಿ ಮ್ಯಾಲ ಮುಡಿ ಎಣ್ಣಿ

ಪ್ರತಿ ನಿತ್ಯ ತಪ್ಪದೆ ಹೀಗೆ ಕಳಿಸಿ ಕೊಡುವುದು ಒಂದು ನಿಷ್ಠೆಯ ವ್ರತ. ದೇವರ ಧ್ಯಾನದಲ್ಲಿ ಅಗಾಧವಾದ ನಿಷ್ಠೆ ಇರುವುದು ಅವಶ್ಯ, ಅನವರತ ಅವನ ನಾಮಸ್ಮರಣೆ ಮಾಡಬೇಕು. ಗರತಿಯೊಬ್ಬಳು ತಾನು ಮಾಡುವ ನಾಮಸ್ಮರಣೆಯ ಕ್ರಮವನ್ನು ವಿವರಿಸುತ್ತಾ.

ನಾರಾಯಣ ನಿನ್ನ ನಾಮದ ಬೀಜವ
ನಾನೆಲ್ಲಿ ಬಿತ್ತಿ ಬೆಳೆಯಲಿ | ನಿನ ನಾಮ
ನಾಲೀಗಿ ಮ್ಯಾಲ ಬೆಳದೇನ

ಎಂದು ಹೇಳಿದ್ದಾಳೆ. ನಾರಾಯಣನ ನಾಮ ಸದಾಕಾಲವು ನನ್ನ ನಾಲಿಗೆಯ ಮೇಲಿದೆ ಎಂದು ಹೇಳಲು ಉಪಯೋಗಿಸಿರುವ ನಿರೂಪಣೆ ಮೆಚ್ಚುವಂಥದ್ದಾಗಿದೆ. ದೇವರನ್ನು ಹೀಗೆ ನಿಷ್ಠೆಯಿಂದ ನಂಬಿದರೆ ಅದರ ಪರಿಣಾಮವೇನೆಂಬದು ಅವಳಿಗೆ ಗೊತ್ತು. ಆದ್ದರಿಂದ ತನ್ನ ಮನಸ್ಸಿಗೆ ಹೀಗೆ ಹೇಳಿಕೊಳ್ಳುತ್ತಾಳೆ.

ಶಿವ ಶಿವ ಎಂದರ ಸಿಡಿಲೆಲ್ಲ ಬಯಲಾಗಿ
ಕಲ್ಲು ಬಂದೆರಗಿ ಕಡೆಗಾಗಿ। ಎಲೆ ಮನವೆ
ಶಿವನೆಂಬ ಶಬುದ ಬಿಡಬ್ಯಾಡ

ತನ್ನದೆಲ್ಲವನ್ನೂ ದೇವರಿಗೆ ಅರ್ಪಿಸಿ ಅವನು ನೀಡುವ ಫಲಾಫಲಗಳನ್ನು ಸ್ವೀಕರಿಸುತ್ತ ನೆಮ್ಮದಿಯಿಂದಿರುರುವುದು ಜೀವನದ ಗುರಿಯೆಂದು ಹಳ್ಳಿಯ ಜನರು ಭಾವಿಸಿದ್ದಾರೆ.

ಮಾದೇವ ನಿನ ಹೊರತು ನಾನ್ಯಾರ ನಂಬಿಲ್ಲ
ನಾವಾಡೆನೆಂಬ ಅಳವಿಲ್ಲ। ಮಲ್ಲಯ್ಯ
ನೀ ನಡಸು ನನ್ನ ಸುರವೆಲ್ಲ.

ಈ ಸರ್ವಾರ್ಪಣೆಯ ಹಿಂದೆ ಅಚಲವಾದ ನಿಷ್ಠೆಯಿರುವುದನ್ನು ನಾವು ಗುರುತಿಸಬಹುದಾಗಿದೆ. ನಿಷ್ಠೆಯಿದ್ದರೆ ಮಾತ್ರ ಸರ್ವಾರ್ಪಣೆ ಸಾಧ್ಯವಾದೀತು. ಭಕ್ತ ಹೃದಯದ ಪರಿಪೂರ್ಣ ಸ್ಥಿತಿಗೆ ಮುಟ್ಟಿರುವುದಕ್ಕೆ ಈ ಭಾವನೆ ಉದಾಹರಣೆಯಾಗಿದೆ.

೯. ಅನುಭಾವ

ಲೌಕಿಕದ ರೀತಿಯಲ್ಲಿ ದೇವರೊಂದಿಗೆ ಸಂಬಂಧವನ್ನಿಟ್ಟುಕೊಂಡು ಭಕ್ತಿಯನ್ನರ್ಪಿಸುವುದು ಒಂದು ರೀತಿಯಾದರೆ ಅಲೌಕಿಕವಾದ ಆ ಶಕ್ತಿಯೊಂದಿಗೆ ಭಾವಾತ್ಮಕ ಸಂಬಂಧಹೊಂದಿ ಅನುಸಂಧಾನ ನಡೆಸುವುದು ಮತ್ತೊಂದು ರೀತಿ. ಇದಕ್ಕೆ ಅನುಭಾವವೆಂದು ಹೆಸರು. ಅನುಭಾವ ಕೇವಲ ದೇವರನ್ನು ಕುರಿತಾದ ಕೃತಕ ವರ್ಣನೆಯಲ್ಲ. ದೇವರನ್ನು ಸಾಕ್ಷಾತ್ಕರಿಸಿಕೊಂಡ ಮನಸ್ಸಿನ ಅನಿಸಿಕೆ. ನಮ್ಮ ದಾರ್ಶನಿಕರು ಈ ನೆಲೆಗೆ ಏರಿರುವಂಥವರು. ಆದರೆ ಹಳ್ಳಿಯ ಮುಗ್ಧ ಭಕ್ತರೂ ಇಂಥ ಅನುಭಾವನ್ನು ಹೊಂದಿದ್ದರೆನ್ನುವುದು ಆಶ್ಚರ್ಯದ ಸಂಗತಿಯಾಗಿದೆ. ಭಕ್ತಿಯ ಕೊನೆಯ ಉದ್ದೇಶ ಭಗವಂತನನ್ನು ಕಾಣುವುದು. ಭಕ್ತಿಯ ಮೂಲಕ

ದೇವರನ್ನು ಕಂಡು ಜೀವನ ಅತ್ಯಂತಿಕ ಗುರಿ ತಲುಪಿದ ಜೀವಿಗಳು ಜಾನಪದ ವಲಯದಲ್ಲಿಯೂ ಇದ್ದಾರೆ.

ಹೂವಿನ್ಯಾಗ ಹುದುಗ್ಯಾನ ಹಾಲ್ಯಾಗ ಮಲಿಗ್ಯಾನ
ಹೊಗ್ಯಾಗ ಕಣ್ಣ ತೆರದಾನ। ಲಿಂಗಯ್ಯ
ನೋಡಟಿಕೆ ನಿದ್ದೀ ಬಯಲಾಗಿ

ಪ್ರಕೃತಿಯ ಸೂಕ್ಷ್ಮಗಳಲ್ಲಿ ಅಡಗಿರುವ ಭಗವಂತನ ದರ್ಶನ ಮಿಂಚಿನಂತೆ ಕ್ಷಣಿಕ ಅನುಭವ. ಆದರೆ ಆ ಕ್ಷಣ ಮಾತ್ರ ಅಮೂಲ್ಯವಾದುದು. ಯಾವುದೋ ಧ್ಯಾನ ಯೋಗದ ಸ್ಥಿತಿಯಲ್ಲಿ ದೇವರು ಒಂದು ಕ್ಷಣ ಅನುಭವಕ್ಕೆ ಸಿಲುಕಿ ಮತ್ತೆ ಮರೆಯಾಗುವ ಸಂಗತಿಯನ್ನು ಇಲ್ಲಿ ವಿವರಿಸಲಾಗಿದೆ.

ನಿದ್ದಿಗಣ್ಣಲ್ಲಿ ಕಂಡ ಸುದ್ದ ಗುರುವಿನ ಪಾದ
ಎದ್ದ ನೋಡಿದರ ನಿರಬಯಲ। ಗುರುರಾಯ
ರುದ್ದರನ ಮಹಿಮೆ ತಿಳಿಯಾದ.

ಎಂದು ಹೇಳುವಲ್ಲಿಯೂ ಮೇಲಿನ ಅಭಿಪ್ರಾಯವೇ ವ್ಯಕ್ತವಾಗಿದೆ. ಶರಣ ಸಾಹಿತ್ಯದಲ್ಲಿ ಧಾರಾಳವಾಗಿ ಬಳಸಿರುವ "ನಿರ್ವಯಲು" ಪದದ ಕಲ್ಪನೆ ಇರಬೇಕಾದರೆ ಇದನ್ನು ರಚಿಸಿದ ಹಳ್ಳಿಯ ಜೀವದ ಆಧ್ಯಾತ್ಮಿಕ ಎತ್ತರ ಗೊತ್ತಾಗುತ್ತದೆ.

ಆಕಾಶದಡಿವ್ಯಾಗ ಧೂಪದ ಹೊಗಿಯೆದ್ದು
ಆಯ್ತು ಮಲ್ಲಯ್ಯ ಸಿವಪೂಜೆ ! ಆಗಾಗ
ಅಕಾಶದ ಗಂಟೆ ಢಣಲೆಂದು.

ಇಲ್ಲಿ ಶಿವನ ಭವ್ಯತೆಯನ್ನು ಅವನು ಇಡೀ ಪ್ರಕೃತಿಯಲ್ಲಿ ಒಂದಾಗಿರುವ ಕ್ರಮವನ್ನು ಬಣ್ಣಿಸಲಾಗಿದೆ. ಶಿವನ ಈ ಮಹತ್ವದ ಕಲ್ಪನೆ ಸಾಧಾರಣ ಮನಸ್ಸಿಗೆ ಮೀರಿದ್ದು, ಅನುಭಾವದ ಅಮೃತ ವನ್ನು ಸವಿದ ಜೀವ ಮಾತ್ರ ಇಂಥ ಚಿತ್ರವನ್ನು ಕಲ್ಪಿಸ ಬಲ್ಲುದು.

೧೦. ಸಮಾರೋಪ

ಇಲ್ಲಿಯ ವರೆಗಿನ ವಿವರಣೆಯಿಂದ ಜಾನಪದ ಭಕ್ತಿಯ ವೈವಿಧ್ಯದ ಅರಿವು ಆಗಿರಲಿಕ್ಕೆ ಸಾಕು. ಭಾವ ತೀವ್ರತೆ ಕಾವ್ಯ ಸೃಷ್ಟಿಗೆ ಕಾರಣವಾಗುತ್ತದೆ. ಹಳ್ಳಿಯ ಮುಗ್ಧರು ಭಾವ ಜೀವಿಗಳು, ಕೂಡಲೇ ಭಾವೋದ್ವೇಗಕ್ಕೆ ಗುರಿಯಾಗುವಂಥವರು. ದೇವರ ಸಂಬಂಧಿಯಾದ ಯಾವುದೇ ಮಾತು, ಸನ್ನಿವೇಶ ಅವರ ಭಾವವನ್ನು ಉದ್ದೀಪಿಸುತ್ತದೆ. ಇಂಥ ಸಂದರ್ಭಗಳಲ್ಲಿ ಮೂಡಿ ಬಂದ ಹಾಡುಗಳು ಶಕ್ತಿಶಾಲಿಯೂ, ಭಾವ ಪೂರ್ಣವೂ ಆಗಿರು ವುದು ಸಹಜವೇ. ಶಿಷ್ಟವಲಯದ ವೈಚಾರಿಕತೆಯ ಬದಲಾಗಿ ಇಲ್ಲಿ ಕೇವಲ ಭಾವುಕತನವೊಂದೇ ತನ್ನ ಆಧಿಪತ್ಯ ನಡೆಸುವುದು. ಆದ್ದರಿಂದ ಈ ಭಕ್ತಿಯ ಗೀತೆಗಳು ಸಹಜಸುಂದರ ರಚನೆ ಗಳಾಗಿವೆ.

ಸಾಹಿತ್ಯ ಜೀವನದ ಪ್ರತಿಬಿಂಬವೆಂದು ಹೇಳಲಾಗುತ್ತದೆ. ಬದುಕಿನಲ್ಲಿ ಕಂಡದ್ದು, ಅನುಭವಿಸಿದ್ದು ಸಾಹಿತ್ಯದಲ್ಲಿ ಪ್ರತಿಬಿಂಬಿ ಸುತ್ತದೆ. ಅನುಭವಕ್ಕೆ ನಿಲುಕಲಾರದ್ದನ್ನು ಪಂಡಿತ ಕವಿಗಳು ಚಿತ್ರಿಸಬಲ್ಲರು. ಆದರೆ ಅದು ಒಂದು ದೃಷ್ಟಿಯಿಂದ ಕೃತಕ ಸೃಷ್ಟಿ ಯಾಗಿರುತ್ತದೆ. ಜಾನಪದರು ತಮ್ಮ ಅನುಭವಕ್ಕೆ ನಿಲುಕಲಾರದ

ಸಂಗತಿಗಳನ್ನು ಕುರಿತು ಎಂದೂ ತಲೆಕೆಡಿಸಿಕೊಂಡಿಲ್ಲ. ಅನುಭವದ ಗಟ್ಟಿ ತಳಹದಿಯ ಮೇಲೆ ರಚಿಸಲಾದ ಸಾಹಿತ್ಯಕ್ಕೆ ಹೆಚ್ಚಿನ ಸತ್ವ ಇರುವುದು. ಜಾನಪದ ಸಾಹಿತ್ಯ ಅನುಭವದ ಸಮರ್ಥ ಅಭಿವ್ಯಕ್ತಿಯಾಗಿರುವುದರಿಂದ ಇಲ್ಲಿಯ ಭಕ್ತಿ ಮತ್ತು ಭಕ್ತಿಗೀತೆಗಳು ರಸಪೂರ್ಣವಾಗಿವೆ, ಹೃದಯಂಗಮವಾಗಿವೆ. ಪುರುಷರಿಗಿಂತ ಸ್ತ್ರೀಯರು ಹೆಚ್ಚು ಭಾವುಕರಾಗಿರುವುದರಿಂದ ಗರತಿಯರ ರಚನೆಗಳು ಇನ್ನೂ ಹೆಚ್ಚಾಗಿ ಭಾವದೀಪ್ತಿಯಿಂದ ಬೆಳಗುತ್ತಿವೆ.

ಗ್ರಂಥಋಣ

೧. ಗರತಿಯ ಹಾಡು

—ಸಂ : ಹಲಸಂಗಿ ಗೆಳೆಯರು.

೨. ಕನ್ನಡ ಜಾನಪದ ಗೀತೆಗಳು

—ಡಾ। ಬಿ. ಎಸ್. ಗದ್ಗಿಮಠ

೩. ನವಲು ಕುಣದಾವ

—ಸಂ : ಮುದೇನೂರ ಸಂಗಣ್ಣ

೪. ಬೆರಸಿ ಇಟ್ಟೇನ ಬೆಲ್ಲ ನೆನಗಡಲಿ

—ಸಂ : ಜ್ಯೋತಿ ಹೊಸೂರ

೫. ಮಾತಾಡೋ ಲಿಂಗವೆ

—ಸಂ : ಡಾ। ಚಂದ್ರಶೇಖರ ಕಂಬಾರ.

೬. ಉತ್ತರ ಕರ್ನಾಟಕದ ಹಂತಿಯ ಹಾಡುಗಳು

—ಸಂ : ಡಾ॥ ಮಲ್ಲಿಕಾರ್ಜುನ ಲಠ್ಠೆ

೭. ಕನ್ನಡ ಜಾನಪದ ಸಾಹಿತ್ಯ ಭಂಡಾರ

—ಸಂ : ಮತಿಘಟ್ಟ ಕೃಷ್ಣಮೂರ್ತಿ

೮. ಜೋಗತಿಯರ ಹಾಡುಗಳು

—ಸಂ : ಡಾ। ಎಂ.ಎಸ್. ಸುಂಕಾಪುರ

೯. ಸ್ವಂತ ಸಂಗ್ರಹದಿಂದ

—(ಅಪ್ರಕಟಿತ)

k. u. p. wd 775-5,000 -5-5-82